# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2317(2781)
ಸದಸ್ಯರ ಹೆಸರು : ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 28-03-2022
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಪದವಿ ಪೂರ್ವ ಇಲಾಖೆಯಲ್ಲಿ ಅಲ್ಪ ಸಂಖ್ಯಾತರ ಶಿಕ್ಷಣ ಸಂಸ್ಥೆಗಳೆಂದು ಘೋಷಣೆ ಮಾಡಲು ಇರುವ ನಿಯಮಾವಳಿಗಳೇನು; ವಿವರದೊಂದಿಗೆ ನಿಯಮಗಳ ಪಟ್ಟಿ ಒದಗಿಸುವುದು; | ಅಲ್ಪ ಸಂಖ್ಯಾತರ ಕಾಲೇಜುಗಳೆಂದು ಘೋಷಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 61 ಎಸ್.ಎಂ.ಸಿ 2009 ದಿ. 03-09-2010, ಸರ್ಕಾರದ ಆದೇಶದ ಸಂಖ್ಯೆ: ಇಡಿ 27 ಮಾಹಿತಿ 2012 (ಭಾಗ 1) ದಿ:-24-07-2012, ಸರ್ಕಾರದ ಆದೇಶದ ಸಂಖ್ಯೆ: ಇಡಿ 27 ಮಾಹಿತಿ 2012 (ಭಾಗ 1) ದಿನಾಂಕ 18.06.2014, ಸರ್ಕಾರದ ಆದೇಶ ಸಂಖ್ಯೆ: ಇಡಿ 123 ಮಾಹಿತಿ 2014 ದಿನಾಂಕ: 02-07-2014, ಸರ್ಕಾರದ ಆದೇಶ ಸಂಖ್ಯೆ: ಇಡಿ 226 ಮಾಹಿತಿ 2018 ದಿನಾಂಕ: 05-11-2018 ರಲ್ಲಿ ತಿಳಿಸಿದೆ.<br>➢ ಶಾಲೆ/ಕಾಲೇಜುಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ರಿಜಿಸ್ಟ್ರೇಷನ್ ಕಾಯ್ದೆಯ ಪ್ರಕಾರ ನೊಂದಣಿಯಾಗಿರಬೇಕು ಹಾಗೂ ಕಾಲಕಾಲಕ್ಕೆ ನವೀಕರಿಸಿರತಕ್ಕದ್ದು.<br>➢ ಶಾಲೆ/ಕಾಲೇಜುಗಳನ್ನು ನಡೆಸುವ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು, ಆಯಾಯ ಭಾಷಾ/ ಮತೀಯ ಅಲ್ಪಸಂಖ್ಯಾತ ಸದಸ್ಯರ ಸಂಖ್ಯೆ ಕನಿಷ್ಠ ಮೂರನೇ ಎರಡರಷ್ಟು ಇರಬೇಕು.<br>➢ ಶಾಲೆಗಳನ್ನು ನಡೆಸುವ ಭಾಷಾ/ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ, ಅಂತಹ ಸದಸ್ಯರು ಸಂಬಂಧಿಸಿದ ತಹಶೀಲ್ದಾರ್‌ರವರಿಂದ ಜಾತಿ ಪ್ರಮಾಣ ಪತ್ರವನ್ನು ಪಡೆದಿರಬೇಕು.<br>➢ ಅಲ್ಪಸಂಖ್ಯಾತ ಸಂಸ್ಥೆ ಶಾಲೆಗಳೆಂದು ಘೋಷಿಸಲು ಆ ಶಾಲೆಗಳು ಆಯಾ ಶೈಕ್ಷಣಿಕ ವರ್ಷದಲ್ಲಿ ಕಡ್ಡಾಯವಾಗಿ ಕನಿಷ್ಠ ಶೇ 25 ರಷ್ಟು ಆಯಾ ಭಾಷಾ/ಆಯಾ ಮತೀಯ ಅಲ್ಪಸಂಖ್ಯಾತರ ಸಮುದಾಯದ |

| | | |
|---|---|---|
| | | ವಿದ್ಯಾರ್ಥಿಗಳನ್ನು ಹೊಂದಿರಬೇಕು.<br>➤ ಸರ್ಕಾರದ ನಿರ್ದೇಶನದಂತೆ ಇಲಾಖಾ ಹಂತದಲ್ಲಿ ನಿರ್ದೇಶಕರು-ಅಧ್ಯಕ್ಷರು, ಜಂಟಿ ನಿರ್ದೇಶಕರು(ಆಡಳಿತ)-ಸದಸ್ಯ ಕಾರ್ಯದರ್ಶಿಗಳು ಮತ್ತು ಜಂಟಿ ನಿರ್ದೇಶಕರು(ಶೈಕ್ಷಣಿಕ)-ಕಾರ್ಯದರ್ಶಿಗಳು ಇವರನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಿ, ಸಲ್ಲಿತವಾಗುವ ಪ್ರಸ್ತಾವನೆಗಳನ್ನು ಇತ್ಯರ್ಥ ಪಡಿಸಲು ಕ್ರಮವಹಿಸುವುದು.<br>(ವಿವರವನ್ನು ಪ್ರತಿ ಅನುಬಂಧ-ಎ ರಲ್ಲಿ ಒದಗಿಸಿದೆ) |
| ಆ) | ಅಲ್ಪ ಸಂಖ್ಯಾತರ ಶಿಕ್ಷಣ ಸಂಸ್ಥೆಯೆಂದು ಪರಿಗಣಿಸಲು ಬಂದಿರುವ ಪ್ರಸ್ತಾವನೆಗಳು ಎಷ್ಟು; ಯಾವಾಗ ಬಂದಿವೆ; ಮತ್ತು ಅವು ಯಾವುವು; | ರಾಜ್ಯದಲ್ಲಿ ನಡೆಯುತ್ತಿರುವ ಖಾಸಗಿ ಅನುದಾನಿತ/ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಪೈಕಿ ಅಲ್ಪ ಸಂಖ್ಯಾತ ಕಾಲೇಜುಗಳೆಂದು ಘೋಷಿಸುವ ಸಂಬಂಧ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯಕ್ಕೆ ಒಟ್ಟು 50 ಪ್ರಸ್ತಾವನೆಗಳು ಸಲ್ಲಿಕೆಯಾಗಿವೆ. (ವಿವರಗಳನ್ನು ಅನುಬಂಧ-ಬಿ ರಲ್ಲಿ ಒದಗಿಸಿದೆ). |
| ಇ) | ಈ ಕಡತಗಳ ವಿಲೇವಾರಿಯು ನಿಧಾನ ಗತಿಯಲ್ಲಿ ಸಾಗುತ್ತಿರಲು ಕಾರಣವೇನು; (ವಿವರ ನೀಡುವುದು) | ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿತವಾಗಿರುವ ಪ್ರಸ್ತಾವನೆಗಳಲ್ಲಿ ಅಗತ್ಯವಾದ ದಾಖಲಾತಿಗಳು ಇಲ್ಲದಿರುವುದರಿಂದ ಸದರಿ ಪ್ರಸ್ತಾವನೆಗಳನ್ನು ಮಾನ್ಯ ಮಾಡಲು ಸಾಧ್ಯವಾಗಿರುವುದಿಲ್ಲ. ಸಂಬಂಧಿಸಿದ ಆಡಳಿತ ಮಂಡಳಿಗಳು ಅಗತ್ಯ ದಾಖಲೆಗಳೊಂದಿಗೆ ಜಿಲ್ಲಾ ಉಪನಿರ್ದೇಶಕರ ಮುಖಾಂತರ ಸಲ್ಲಿಸಿದಲ್ಲಿ ನಿಯಮಾನುಸಾರ ಪರಿಶೀಲಿಸಿ, ಅಗತ್ಯ ಕ್ರಮವಹಿಸಲಾಗುವುದು. |
| ಈ) | ಯಾವ ಕಾಲಮಿತಿಯೊಳಗೆ ಈ ಪ್ರಸ್ತಾವನೆಗಳಿಗೆ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಣೆ ಮಾಡಿ ಆದೇಶ ಹೊರಡಿಸಲಾಗುವುದು? | |

**ಸಂಖ್ಯೆ: ಇಪಿ 66 ಡಿಜಿಡಬ್ಲ್ಯೂ 2022**

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

LC Q NO. 2317(2781) ಗೆ ಅನುಬಂಧ-A

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 5 ಎಸ್‌ಎಂಸಿ 2002

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 20-07-2004

ಸು ತ್ತೋ ಲೆ

ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಬಗ್ಗೆ ಈ ಕೆಳಕಂಡಂತೆ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ – ಅಧ್ಯಕ್ಷರು

2) ಸರ್ಕಾರದ ಕಾರ್ಯದರ್ಶಿಗಳು, ಕಾನೂನು ಇಲಾಖೆ – ಸದಸ್ಯರು

3) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು – ಸದಸ್ಯರು

4) ನಿರ್ದೇಶಕರು, ಉರ್ದು ಮತ್ತು ಇತರೆ ಭಾಷಾ ಅಲ್ಪಸಂಖ್ಯಾತ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು – ಸದಸ್ಯ ಕಾರ್ಯದರ್ಶಿ

ಮೇಲ್ಕಂಡ ಸಮಿತಿಯು ಅಲ್ಪಸಂಖ್ಯಾತ ಮಾನ್ಯತೆಯನ್ನು ಕೋರುವ ಶಿಕ್ಷಣ ಸಂಸ್ಥೆಗಳ ಮನವಿಗಳನ್ನು ಆಯಾ ಸಂಸ್ಥೆಗಳು ಈ ಕೆಳಕಂಡ ಮಾರ್ಗಸೂಚಿ/ಷರತ್ತುಗಳನ್ನು ಪಾಲಿಸಿರುವ ಬಗ್ಗೆ ಪರಿಶೀಲಿಸಿ, ಇಂತಹ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಸ್ಥಾನಮಾನವನ್ನು ನೀಡುವ ಬಗ್ಗೆ ಸರ್ಕಾರವು ತೀರ್ಮಾನ ಕೈಗೊಳ್ಳುವ ಸಲುವಾಗಿ ಸಂಬಂಧಪಟ್ಟ ಕೆಳಕಂಡ

...2

ಉಪಬಂಧಗಳನ್ನು ಹಾಜರುಪಡಿಸಲು ಸದಸ್ಯ - ಕಾರ್ಯದರ್ಶಿಯವರಿಗೆ ಸೂಚನೆಗಳನ್ನು ನೀಡತಕ್ಕದ್ದು.

1) ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ರಿಜಿಸ್ಟ್ರೇಷನ್ ಕಾಯ್ದೆ ಪ್ರಕಾರ ನೋಂದಣಿಯಾಗಿರಬೇಕು ಹಾಗೂ ಕಾಲಕಾಲಕ್ಕೆ ನವೀಕರಿಸಿರತಕ್ಕದ್ದು.

2) ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು, ಆಯಾಯ ಭಾಷಾ/ಮತೀಯ ಅಲ್ಪಸಂಖ್ಯಾತ ಸದಸ್ಯರ ಸಂಖ್ಯೆ ಕನಿಷ್ಠ ಮೂರನೇ ಎರಡರಷ್ಟು ಇರಬೇಕು.

3) ಶಾಲೆಗಳನ್ನು ನಡೆಸುವ ಭಾಷಾ/ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ, ಅಂತಹ ಸದಸ್ಯರು ಸಂಬಂಧಿಸಿದ ತಹಶೀಲ್ದಾರ್‌ರವರಿಂದ ಜಾತಿ ಪ್ರಮಾಣ ಪತ್ರ ಪಡೆದಿರಬೇಕು.

4) ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡ 50ರಷ್ಟು ಭಾಷಾ/ಮತೀಯ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ದಾಖಲೆ (admissions) ಮಾಡಿಕೊಳ್ಳತಕ್ಕದ್ದು.

ಈ ಮೇಲ್ಕಂಡ ಮಾರ್ಗಸೂಚಿಯನ್ವಯ ಹಾಗೂ ಈ ಸಂಬಂಧದಲ್ಲಿ ಕಾಲಕಾಲಕ್ಕೆ ಹೊರಡಿಸಲಾದ ಆದೇಶಗಳು/ಸೂಚನೆಗಳು/ಸುತ್ತೋಲೆಗಳ ಹಿನ್ನಲೆಯಲ್ಲಿ ಸೂಕ್ತ ಪ್ರಸ್ತಾವನೆಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು/ನಿರ್ದೇಶಕರು ಸಮಿತಿಯ ಪರಿಶೀಲನೆಗಾಗಿ ಮಂಡಿಸುವಂತೆ ಸೂಚಿಸಿದೆ ಹಾಗೂ ಮೇಲ್ಕಂಡ ಸೂಚನೆಗಳನ್ನು ಪೂರೈಸುವ ಶಿಕ್ಷಣ ಸಂಸ್ಥೆಗಳಿಗೆ, ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಸ್ಥಾನಮಾನವನ್ನು ನೀಡಲು ಪ್ರತ್ಯೇಕ ಪ್ರಸ್ತಾವಗಳನ್ನು ಪರಿಶೀಲನಾ ಸಮಿತಿಗೆ ಮಂಡಿಸಲು ಸಹ ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ. ಸದರಿ ಸಮಿತಿಯು ಆಗಿಂದಾಗ್ಗೆ ಸಭೆಗಳನ್ನು ನಡೆಸಿ, ಇಂತಹ ಎಲ್ಲಾ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಬೇಕಾಗಿದೆ.

20/7/2

(ಎಂ.ಎನ್.ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ

ಇವರಿಗೆ:-

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಇವರ ಆಪ್ತ ಕಾರ್ಯದರ್ಶಿಯವರಿಗೆ

2) ಸರ್ಕಾರದ ಕಾರ್ಯದರ್ಶಿಗಳು, ಕಾನೂನು ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರಿಗೆ

3) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

4) ನಿರ್ದೇಶಕರು, ಉರ್ದು ಮತ್ತು ಇತರೆ ಭಾಷಾ ಅಲ್ಪಸಂಖ್ಯಾತ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

ಸಂಖ್ಯೆ: ಇಡಿ 5 ಎಸ್‌ಎಂಸಿ 2002

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 23-08-2004.

## ಸುತ್ತೋಲೆ

ವಿಷಯ: ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಬಗ್ಗೆ.

ಉಲ್ಲೇಖ: ಸಮ ಸಂಖ್ಯೆಯ ಸುತ್ತೋಲೆ ದಿನಾಂಕ 20-7-2004.

---

ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಬಗ್ಗೆ ಉಲ್ಲೇಖ (1)ರ ಸುತ್ತೋಲೆಯಲ್ಲಿ ಕೆಳಕಂಡಂತೆ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

1) ಪ್ರಧಾನ ಕಾರ್ಯದರ್ಶಿಗಳು,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ,
ಶಿಕ್ಷಣ ಇಲಾಖೆ — ಅಧ್ಯಕ್ಷರು
2) ಸರ್ಕಾರದ ಕಾರ್ಯದರ್ಶಿಗಳು, ಕಾನೂನು ಇಲಾಖೆ — ಸದಸ್ಯರು
3) ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು — ಸದಸ್ಯರು
4) ನಿರ್ದೇಶಕರು,
ಉರ್ದು ಮತ್ತು ಇತರೆ ಭಾಷಾ
ಅಲ್ಪಸಂಖ್ಯಾತ ಶಾಲೆಗಳು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು — ಸದಸ್ಯ ಕಾರ್ಯದರ್ಶಿ

ದಿನಾಂಕ:21-08-2004ರಂದು ನಡೆದ ಈ ಸಮಿತಿಯ ಪ್ರಥಮ ಸಭೆಯಲ್ಲಿ, ಸರ್ಕಾರದ ಸಹ ಕಾರ್ಯದರ್ಶಿ (ಸಮನ್ವಯಾಧಿಕಾರಿ), ಶಿಕ್ಷಣ ಇಲಾಖೆ ಇವರನ್ನು ಸದರಿ ಸಮಿತಿಯ ಸಹಕೃತ ಸದಸ್ಯರನ್ನಾಗಿ ನಿಯುಕ್ತಿಗೊಳಿಸಲು ತೀರ್ಮಾನಿಸಲಾಯಿತು.

ಅದರಂತೆ ಪರಿಶೀಲನಾ ಸಮಿತಿಯನ್ನು ಈ ಕೆಳಕಂಡಂತೆ ಪುನರ್ ರಚಿಸಲಾಗಿದೆ:

1) ಪ್ರಧಾನ ಕಾರ್ಯದರ್ಶಿಗಳು,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ,
ಶಿಕ್ಷಣ ಇಲಾಖೆ – ಅಧ್ಯಕ್ಷರು
2) ಸರ್ಕಾರದ ಕಾರ್ಯದರ್ಶಿಗಳು, ಕಾನೂನು ಇಲಾಖೆ – ಸದಸ್ಯರು
3) ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು – ಸದಸ್ಯರು
4) ಸರ್ಕಾರದ ಸಹ ಕಾರ್ಯದರ್ಶಿಗಳು (ಸಮನ್ವಯಾಧಿಕಾರಿ),
ಶಿಕ್ಷಣ ಇಲಾಖೆ – ಸಹಕೃತ ಸದಸ್ಯರು
5) ನಿರ್ದೇಶಕರು,
ಉರ್ದು ಮತ್ತು ಇತರೆ ಭಾಷಾ
ಅಲ್ಪಸಂಖ್ಯಾತ ಶಾಲೆಗಳು,
ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು – ಸದಸ್ಯ ಕಾರ್ಯದರ್ಶಿ

ಮುಂದುವರೆದು, ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಪ್ರತ್ಯೇಕ ಪ್ರಸ್ತಾವನೆಗಳನ್ನು ಪರಿಶೀಲನಾ ಸಮಿತಿಗೆ ಮಂಡಿಸುವ ಮೊದಲು, ಅಂತಹ ಪ್ರಸ್ತಾವನೆಗಳನ್ನು ಸರ್ಕಾರದ ಪರಿಶೀಲನೆಗಾಗಿ ಸಮಿತಿಯ ಸಭೆಯು ನಡೆಯುವ ಒಂದು ವಾರಕ್ಕೆ ಮುಂಚಿತವಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ.

23/8/21
(ಎಂ.ಎನ್.ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಇವರಿಗೆ:-

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಇವರ ಆಪ್ತ ಕಾರ್ಯದರ್ಶಿಯವರಿಗೆ
2) ಸರ್ಕಾರದ ಕಾರ್ಯದರ್ಶಿಗಳು, ಕಾನೂನು ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರಿಗೆ
3) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4) ನಿರ್ದೇಶಕರು, ಉರ್ದು ಮತ್ತು ಇತರೆ ಭಾಷಾ ಅಲ್ಪಸಂಖ್ಯಾತ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
5) ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ ಇವರ ಆಪ್ತ ಸಹಾಯಕರಿಗೆ.

## ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 22 ಎಂಪಿಎಸ್ 2005

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 12-12-2006

## ತಿದ್ದೋಲೆ

ದಿನಾಂಕ 20-07-2004ರ ಸುತ್ತೋಲೆ ಸಂಖ್ಯೆ: ಇಡಿ 5 ಎಸ್‌ಎಂಸಿ 2002ರ ಪುಟ 2 ರಲ್ಲಿನ ಕ್ರಮ ಸಂಖ್ಯೆ: 4ರ ನಮೂದು ಈ ಕೆಳಕಂಡಂತೆ ಇದೆ:-

"ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡ 50 ರಷ್ಟು ಭಾಷಾ / ಮತೀಯ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ದಾಖಲೆ **(admissions)** ಮಾಡಿಕೊಳ್ಳತಕ್ಕದ್ದು"

ಸದರಿ ನಮೂದನ್ನು ಕೆಳಕಂಡಂತೆ ಬದಲಾಯಿಸಿ ಓದಿಕೊಳ್ಳತಕ್ಕದ್ದು:

"ರಾಜ್ಯದಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ ಆಯಾಯಾ ಭಾಷಾ /ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ಆಯಾಯಾ ಅಲ್ಪಸಂಖ್ಯಾತ ಸಮುದಾಯದ ಜನಗಣತಿಗೆ ತಕ್ಕಂತೆ, ಆಯಾಯಾ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಕಾಪಾಡಿಕೊಳ್ಳಲು, ಆಯಾಯ ವರ್ಗದ ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ಕನಿಷ್ಠ ಅದೇ ಪ್ರಮಾಣದಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು"

(ಎಂ.ಎನ್.ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ

ಗೆ:-

1) ಸರ್ಕಾರದ ಕಾರ್ಯದರ್ಶಿಗಳು, ಕಾನೂನು ಇಲಾಖೆ, ವಿಧಾನಸೌಧ, ಬೆಂಗಳೂರು
2) ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ, ಬೆಂಗಳೂರು
3) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4) ನಿರ್ದೇಶಕರು, ಉರ್ದು ಮತ್ತು ಇತರೆ ಭಾಷಾ ಅಲ್ಪಸಂಖ್ಯಾತ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

## ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 4 ಎಸ್‌ಎಂಸಿ 2005

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 11-9-2007.

## ಅಧಿಸೂಚನೆ

1 ಕರ್ನಾಟಕ ರಾಜ್ಯದಲ್ಲಿನ ಮತೀಯ ಅಲ್ಪ ಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಭಾಷಾ/ ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಬಗ್ಗೆ ದಿನಾಂಕ: 20-7-2004 ರ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 5 ಎಸ್‌ಎಂಸಿ 2002 ರಲ್ಲಿ ಸರ್ಕಾರದ ಹಂತದಲ್ಲಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ಈ ಕೆಳಕಂಡ ಸದಸ್ಯರು ಹಾಗೂ ಅಧ್ಯಕ್ಷರನ್ನೊಳಗೊಂಡ ಪರಿಶೀಲನಾ ಸಮಿತಿಯನ್ನು ರಚಿಸಲಾಗಿತ್ತು.

| | |
|---|---|
| 1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ,<br>ಶಿಕ್ಷಣ ಇಲಾಖೆ. | — ಅಧ್ಯಕ್ಷರು |
| 2. ಸರ್ಕಾರದ ಕಾರ್ಯದರ್ಶಿಗಳು,<br>ಕಾನೂನು ಇಲಾಖೆ. | — ಸದಸ್ಯರು |
| 3. ಆಯುಕ್ತರು,<br>ಸಾರ್ವಜನಿಕ ಶಿಕ್ಷಣ ಇಲಾಖೆ,<br>ಬೆಂಗಳೂರು. | — ಸದಸ್ಯರು |
| 4. ನಿರ್ದೇಶಕರು,<br>ಉರ್ದು ಮತ್ತು ಇತರೆ ಭಾಷಾ<br>ಅಲ್ಪ ಸಂಖ್ಯಾತ ಶಾಲೆಗಳು,<br>ಸಾರ್ವಜನಿಕ ಶಿಕ್ಷಣ ಇಲಾಖೆ,<br>ಬೆಂಗಳೂರು. | — ಸದಸ್ಯ ಕಾರ್ಯದರ್ಶಿ |

2 ಈಗ ಇಂತಹ ಪ್ರಸ್ತಾವನೆಗಳನ್ನು ಸಂಬಂಧಿಸಿದ ಆಯಾಯ ಆಯುಕ್ತಾಲಯದ ಮಟ್ಟದಲ್ಲಿಯೇ ಪರಿಶೀಲಿಸಿ ಮುಂದಿನ ಅಗತ್ಯ ಕ್ರಮ ಕೈಗೊಳ್ಳುವಂತೆ ಈ ಕೆಳಕಂಡಂತೆ ಅಧಿಕಾರ ಪ್ರತ್ಯಾಯೋಜಿಸಲು ಸರ್ಕಾರವು ತೀರ್ಮಾನಿಸಿರುತ್ತದೆ.

ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು:

i) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ........ ಬೆಂಗಳೂರು ವಲಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು

ii) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ .......... ವಾಯುವ್ಯ ವಲಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು

iii) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ .......... ಈಶಾನ್ಯ ವಲಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು

iv) ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ .......... ಪದವಿ ಪೂರ್ವ ಶಿಕ್ಷಣ ಕಾಲೇಜುಗಳು

3 ಅದರಂತೆ ಆಯಾ ಆಯುಕ್ತರ ಕಚೇರಿಯಲ್ಲಿ ಸಂಬಂಧಿಸಿದ ಆಯುಕ್ತರು ಅಧ್ಯಕ್ಷರಾಗಿರುತ್ತಾರೆ ಹಾಗೂ ಸಂಬಧಿಸಿದ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ಸದಸ್ಯ ಕಾರ್ಯದರ್ಶಿ ಎಂದು ಇರುವ ಪರಿಶೀಲನಾ ಸಮಿತಿಯನ್ನು ಈ ಕೆಳಕಂಡಂತೆ ರಚಿಸಲು ಈ ಮೂಲಕ ಸೂಚಿಸಲಾಗಿದೆ.

| | | |
|---|---|---|
| ಆಯುಕ್ತರು | .......... | ಅಧ್ಯಕ್ಷರು |
| ನಿರ್ದೇಶಕರು | ..... | ಸದಸ್ಯರು |
| ಜಂಟಿ ನಿರ್ದೇಶಕರು | .......... | ಸದಸ್ಯ ಕಾರ್ಯದರ್ಶಿ |

4. ದಿನಾಂಕ: 20-7-2004 ರ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 5 ಎಸ್‌ಎಂಸಿ 2002 ಹಾಗೂ ದಿನಾಂಕ: 12-12-2006 ರ ತಿದ್ದೋಲೆ ಸಂಖ್ಯೆ: ಇಡಿ 22 ಎಂಪಿಎಸ್ 2006 ರಲ್ಲಿ ನಿಗದಿ ಪಡಿಸಿರುವ ಮಾರ್ಗಸೂಚಿಗಳನ್ವಯ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅಲ್ಪ ಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಮತೀಯ/ಭಾಷಾ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಬಗ್ಗೆ ಕ್ರಮ ಜರುಗಿಸಲು ಈ ಮೂಲಕ ಆದೇಶಿಸಲಾಗಿದೆ.
5. ಡಿ.ಎಡ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಪರಿಶೀಲಿಸಿ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಬಗ್ಗೆ ಸರ್ಕಾರದ ಹಂತದಲ್ಲಿಯೇ ಕ್ರಮ ತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎಸ್. ಜಂಪಾಲಿ)
ಸರ್ಕಾರದ ಉಪ ಕಾರ್ಯದರ್ಶಿ
ಶಿಕ್ಷಣ ಇಲಾಖೆ.

ಗೆ:

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ
3. ನಿರ್ದೇಶಕರು, ಉರ್ದು ಮತ್ತು ಇತರ ಭಾಷಾ ಅಲ್ಪ ಸಂಖ್ಯಾತ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

4. ಸಂಬಂಧಿಸಿದ ಎಲ್ಲಾ ಜಂಟಿ ನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, (ನಿರ್ದೇಶಕರು, ಉರ್ದು ಮತ್ತು ಇತರೆ ಭಾಷಾ ಅಲ್ಪ ಸಂಖ್ಯಾತ ಶಾಲೆಗಳು ಇವರ ಮುಖಾಂತರ)
5. ಸಂಬಂಧಿಸಿದ ಎಲ್ಲಾ ಉಪ ನಿರ್ದೇಶಕರುಗಳು, (ನಿರ್ದೇಶಕರು, ಉರ್ದು ಮತ್ತು ಇತರೆ ಭಾಷಾ ಅಲ್ಪ ಸಂಖ್ಯಾತ ಶಾಲೆಗಳು ಇವರ ಮುಖಾಂತರ)
6. ಸಂಬಂಧಿಸಿದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, (ನಿರ್ದೇಶಕರು, ಉರ್ದು ಮತ್ತು ಇತರ ಭಾಷಾ ಅಲ್ಪ ಸಂಖ್ಯಾತ ಶಾಲೆಗಳು ಇವರ ಮುಖಾಂತರ)

ಪ್ರತಿ: ಮಾಹಿತಿಗಾಗಿ

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇವರ ಆಪ್ತ ಕಾರ್ಯದರ್ಶಿ
3. ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ (ಅಲ್ಪ ಸಂಖ್ಯಾತ)
5. ಹೆಚ್ಚುವರಿ ಪ್ರತಿಗಳು

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 17 ಪಿಎಂಸಿ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:21-05-2008.

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560 001.

ಇವರಿಗೆ:

ಆಯುಕ್ತರು,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560 012.

ಮಾನ್ಯರೆ,

ವಿಷಯ:- ಅಲ್ಪಸಂಖ್ಯಾತ ಸಮುದಾಯ ಸಂಸ್ಥೆಗಳು ನಡೆಸುತ್ತಿರುವ ಪದವಿ ಪೂರ್ವ ಕಾಲೇಜುಗಳನ್ನು ಅಲ್ಪಸಂಖ್ಯಾತ ಪದವಿ ಪೂರ್ವ ಕಾಲೇಜುಗಳೆಂದು ಘೋಷಿಸುವ ಬಗ್ಗೆ.

ಉಲ್ಲೇಖ:- ತಮ್ಮ ಪತ್ರ ಸಂಖ್ಯೆ: ಪಪೂಶಿಇ/ಮಾನ್ಯತೆ/ಇಇ 058/ 2006-07, ದಿನಾಂಕ:13/15-02-2008

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದುಕೊಂಡು ದಿನಾಂಕ:12-12-2006ರ ತಿದ್ದೋಲೆಯನ್ನು ಹೊರಡಿಸಲಾಗಿರುತ್ತದೆ ಹಾಗೂ ದಿನಾಂಕ:20-07-2004ರ ಸುತ್ತೋಲೆಯಲ್ಲಿ ಆಡಳಿತ ಮಂಡಳಿಯ ಸ್ವರೂಪವನ್ನು ವಿಷದಗೊಳಿಸಲಾಗಿರುತ್ತದೆ.

ಆದುದರಿಂದ, ದಿನಾಂಕ:20-07-2004ರ ಸುತ್ತೋಲೆ ಹಾಗೂ ದಿನಾಂಕ:12-12-2006ರ ತಿದ್ದೋಲೆಯಲ್ಲಿ ತಿಳಿಸಿರುವಂತೆ, ಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆಂದು ಕೋರಲು ಹಾಗೂ ಈ ಬಗ್ಗೆ ನಿಮ್ಮಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು 2 ತಿಂಗಳೊಳಗೆ ಇತ್ಯರ್ಥಪಡಿಸುವಂತೆ ಸಹ ಸೂಚನೆ ನೀಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಂ.ಎಸ್. ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಪಿಯು ಶಿಕ್ಷಣ ಇಲಾಖೆ.
21/5/08

DA-10332

29/5/2008

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 61 ಎಸ್‌ಎಂಎ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:03-09-2010.

## ಅಧಿಸೂಚನೆ

ಕರ್ನಾಟಕ ರಾಜ್ಯದಲ್ಲಿ ಭಾಷಾ ಅಲ್ಪ ಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಭಾಷಾ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಮುನ್ನ ಮೀಸಲಾತಿ ನಿಯಮಗಳನ್ನು ಪಾಲಿಸುವ ಬಗ್ಗೆ ಜಿಜ್ಞಾಸೆ ಉಂಟಾದ್ದ ಕಾರಣದಿಂದಾಗಿ, ಈ ವಿಷಯವನ್ನು ದಿನಾಂಕ:18-04-2005 ರಂದು ನಡೆದ ಸಚಿವ ಸಂಪುಟದ ಉಪ ಸಮಿತಿಯ ಮುಂದೆ ತರಲಾಗಿದ್ದು, ಭಾಷಾ ಅಲ್ಪಸಂಖ್ಯಾತರ (Linguistic Minority Institutions) ಅನುದಾನಿತ ಶಾಲೆಗಳಲ್ಲಿ ಮೀಸಲಾತಿ ನಿಯಮವನ್ನು ಅಳವಡಿಸತಕ್ಕದ್ದೆಂದು ನಿರ್ಣಯಿಸಿರುವ ಹಿನ್ನೆಲೆಯಲ್ಲಿ ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಕಡ್ಡಾಯವಾಗಿ ಮೀಸಲಾತಿ ನಿಯಮಗಳನ್ನು ಪಾಲಿಸತಕ್ಕದ್ದೆಂದು ಸರ್ಕಾರವು ತೀರ್ಮಾನಿಸಿದೆ.

ಕರ್ನಾಟಕ ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತ ಸಂಸ್ಥೆಗಳನ್ನು ಘೋಷಿಸುವ ರೀತಿಯಲ್ಲಿಯೇ ಭಾಷಾ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಪ್ರಸ್ತಾವನೆಗಳನ್ನು ಸಂಬಂಧಿಸಿದ ಆಯಾಯ ಆಯುಕ್ತಾಲಯದ ಮಟ್ಟದಲ್ಲಿಯೇ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಕೆಳಕಂಡಂತೆ ಅಧಿಕಾರವನ್ನು ಪ್ರತ್ಯಾಯೋಜಿಸಲು ಸರ್ಕಾರವು ತೀರ್ಮಾನಿಸಿರುತ್ತದೆ.

ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು:

| | | |
|---|---|---|
| i) ಆಯುಕ್ತರು<br>ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. | ...... | ಬೆಂಗಳೂರು ವಲಯದ ಪ್ರಾಥಮಿಕ<br>ಪ್ರೌಢ ಶಿಕ್ಷಣ-ಸಂಸ್ಥೆಗಳು |
| ii) ಅಪರ ಆಯುಕ್ತರು,<br>ಸಾರ್ವಜನಿಕ ಶಿಕ್ಷಣ ಇಲಾಖೆ | ...... | ವಾಯುವ್ಯ ವಲಯದ ಪ್ರಾಥಮಿಕ<br>ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು |
| iii) ಅಪರ ಆಯುಕ್ತರು,<br>ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ | ...... | ಈಶಾನ್ಯ ವಲಯದ ಪ್ರಾಥಮಿಕ<br>ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು |
| iv) ಆಯುಕ್ತರು,<br>ಪದವಿ ಪೂರ್ವ ಶಿಕ್ಷಣ ಇಲಾಖೆ | ...... | ಪದವಿ ಪೂರ್ವ ಶಿಕ್ಷಣ ಕಾಲೇಜುಗಳು |

9/9 DA-3363 13/9

ಅದರಂತೆ ಆಯಾ ಆಯುಕ್ತರ ಕಛೇರಿಯಲ್ಲಿ ಸಂಬಂಧಿಸಿದ ಆಯುಕ್ತರು ಅಧ್ಯಕ್ಷರಾಗಿ, ಸಂಬಂಧಿಸಿದ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಸಂಬಂಧಿಸಿದ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ಸದಸ್ಯ ಕಾರ್ಯದರ್ಶಿ ಎಂದು ಈ ಕೆಳಕಂಡಂತೆ ಪರಿಶೀಲನಾ ಸಮಿತಿಯನ್ನು ರಚಿಸಲು ಈ ಮೂಲಕ ಆದೇಶಿಸಲಾಗಿದೆ.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

| | | |
|---|---|---|
| ಆಯುಕ್ತರು | ---- | ಅಧ್ಯಕ್ಷರು |
| ನಿರ್ದೇಶಕರು (ಪ್ರಾಥಮಿಕ) | ---- | ಸದಸ್ಯರು |
| ನಿರ್ದೇಶಕರು, ಉರ್ದು ಮತ್ತು ಇತರ ಭಾಷಾ ಅಲ್ಪ ಸಂಖ್ಯಾತ ಶಾಲೆಗಳು | ---- | ಸದಸ್ಯ ಕಾರ್ಯದರ್ಶಿ |

ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.

| | | |
|---|---|---|
| ಅಪರ ಆಯುಕ್ತರು | ---- | ಅಧ್ಯಕ್ಷರು |
| ನಿರ್ದೇಶಕರು | ---- | ಸದಸ್ಯರು |
| ಜಂಟಿ ನಿರ್ದೇಶಕರು | ---- | ಸದಸ್ಯ ಕಾರ್ಯದರ್ಶಿ |

ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.

| | | |
|---|---|---|
| ಅಪರ ಆಯುಕ್ತರು | ---- | ಅಧ್ಯಕ್ಷರು |
| ನಿರ್ದೇಶಕರು | ---- | ಸದಸ್ಯರು |
| ಜಂಟಿ ನಿರ್ದೇಶಕರು | ---- | ಸದಸ್ಯ ಕಾರ್ಯದರ್ಶಿ |

ಭಾಷಾ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂದರ್ಭದಲ್ಲಿ ರೋಸ್ಟರ್ ಪದ್ಧತಿ ಪಾಲಿಸುವ ಷರತ್ತನ್ನು ವಿಧಿಸುವುದು ಹಾಗೂ ದಿನಾಂಕ:20-07-2004ರ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 5 ಎಸ್‌ಎಂಸಿ 2002 ಹಾಗೂ ದಿನಾಂಕ:12-12-2006ರ ತಿದ್ದೋಲೆ ಸಂಖ್ಯೆ:ಇಡಿ 22 ಎಂಪಿಎಸ್ 2006 ರಲ್ಲಿ ನಿಗದಿಪಡಿಸಿರುವ ಮಾರ್ಗಸೂಚಿಗಳನ್ವಯ, ಪ್ರಸ್ತಾವನೆಗಳನ್ನು ಪರಿಶೀಲಿಸಿ ಭಾಷಾ ಅಲ್ಪ ಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಭಾಷಾ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸಲು ಕಂಡಿಕೆ-2 ರಲ್ಲಿ ಸೂಚಿಸಿರುವ ರೀತಿಯಲ್ಲಿ ಅಧಿಕಾರ ಪ್ರತ್ಯಾಯೋಜಿಸಿದೆ.

(signature)

ಡಿ.ಎಡ್. ಕಾಲೇಜುಗಳಿಗೆ ಸಂಬಂಧಪಟ್ಟಂತೆ ಭಾಷಾ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಬಗ್ಗೆ ಸರ್ಕಾರದ ಹಂತದಲ್ಲಿಯೇ ಕ್ರಮ ತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

3/09/10

(ಎಸ್.ಹೆಚ್. ಹರಿಯವರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಸಮಿತಿಗಳು).

ಇವರಿಗೆ,

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗಾ.
4. ನಿರ್ದೇಶಕರು, ಉರ್ದು ಮತ್ತು ಇತರೆ ಭಾಷಾ ಅಲ್ಪ ಸಂಖ್ಯಾತ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಸಂಬಂಧಿಸಿದ ಎಲ್ಲಾ ಜಂಟಿ ನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, (ನಿರ್ದೇಶಕರು, ಉರ್ದು ಮತ್ತು ಇತರೆ ಭಾಷಾ ಅಲ್ಪ ಸಂಖ್ಯಾತ ಶಾಲೆಗಳು ಇವರ ಮುಖಾಂತರ).
6. ಸಂಬಂಧಿಸಿ ಎಲ್ಲಾ ಉಪ ನಿರ್ದೇಶಕರುಗಳು, (ನಿರ್ದೇಶಕರು, ಉರ್ದು ಮತ್ತು ಇತರೆ ಭಾಷಾ ಅಲ್ಪ ಸಂಖ್ಯಾತ ಶಾಲೆಗಳು ಇವರ ಮುಖಾಂತರ).
7. ಸಂಬಂಧಿಸಿದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು (ನಿರ್ದೇಶಕರು, ಉರ್ದು ಮತ್ತು ಇತರೆ ಭಾಷಾ ಅಲ್ಪ ಸಂಖ್ಯಾತ ಶಾಲೆಗಳು ಇವರ ಮುಖಾಂತರ).

ಪ್ರತಿ ಮಾಹಿತಿಗಾಗಿ:-

1) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರ ಆಪ್ತ ಕಾರ್ಯದರ್ಶಿ.
3) ಸರ್ಕಾರದ ಉಪ ಕಾರ್ಯದರ್ಶಿಗಳು (ಆಡಳಿತ)/(ಸೇವೆಗಳು), ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ. ಶಿಕ್ಷಣ ಇಲಾಖೆ ಇವರ ಆಪ್ತ ಸಹಾಯಕರು.
4) ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5) ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ (ಅಲ್ಪ ಸಂಖ್ಯಾತ).
6) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| ವಿಷಯ | ಮಕ್ಕಳ ಶಿಕ್ಷಣ ಹಕ್ಕು ಜಾರಿಗೊಳಿಸಲು ಹೊರಡಿಸಲಾಗಿರುವ ನಿಯಮಾವಳಿಗಳ ಅಡಿಯಲ್ಲಿ ಅಲ್ಪಸಂಖ್ಯಾತ ವರ್ಗಗಳ ಶಾಲೆಗಳೆಂದು ಘೋಷಿಸುವ ಬಗ್ಗೆ. |
| ಓದಲಾಗಿದೆ | 1. ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 5 ಎಸ್‌ಎಂಎ 2002 ದಿನಾಂಕ 20.07.2004.<br>2. ಸರ್ಕಾರದ ಆದೇಶ ತಿದ್ದೋಲೆ ಸಂಖ್ಯೆ: ಇಡಿ 22 ಎಂಪಿಎಸ್ 2005 ದಿನಾಂಕ 12.12.2006<br>3. ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 4 ಎಸ್‌ಎಂಪಿ 2005 ದಿನಾಂಕ 11.09.2007<br>4. ಶಿಕ್ಷಣ ಇಲಾಖೆಯ ಅಧಿಸೂಚನೆ ಸಂಖ್ಯೆ: ಇಡಿ 77 ಯೋಯೋಕ 2010, ದಿನಾಂಕ 28.04.2012 |

ಪ್ರಸ್ತಾವನೆ: DA-119

1. ಮೇಲೆ (1) ರಲ್ಲಿ ಓದಲಾದ ಸುತ್ತೋಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಬಗ್ಗೆ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ ಹಾಗೂ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಸ್ಥಾನಮಾನ ನೀಡುವ ಸಂಬಂಧ "ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡ 50 ರಷ್ಟು ಭಾಷಾ/ಮತೀಯ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ದಾಖಲೆ (admissions) ಮಾಡಿಕೊಳ್ಳತಕ್ಕದ್ದು" ಎನ್ನುವ ಸೂಚನೆ ನೀಡಲು ತಿಳಿಸಲಾಗಿತ್ತು.
2. ಮೇಲೆ ಆದೇಶ ಸಂಖ್ಯೆ 2 ರಲ್ಲಿ ಓದಲಾದ ತಿದ್ದೋಲೆಯಲ್ಲಿ "ರಾಜ್ಯದಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ ಆಯಾ ಭಾಷಾ / ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ಆಯಾ ಅಲ್ಪಸಂಖ್ಯಾತ ಸಮುದಾಯದ ಜನಗಣತಿಗೆ ತಕ್ಕಂತೆ. ಆಯಾ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಕಾಪಾಡಿಕೊಳ್ಳಲು ಆಯಾಯ ವರ್ಗದ ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ಕನಿಷ್ಠ ಅದೇ ಪ್ರಮಾಣದಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು" ತಿಳಿಸಿರುವುದನ್ನು ಮತ್ತೊಮ್ಮೆ ಅವಗಾಹಿಸಲಾಗಿದೆ.
3. ಮೇಲೆ (3) ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಭಾಷಾ/ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಕುರಿತು ಅಗತ್ಯ ಕ್ರಮಕೈಗೊಳ್ಳಲು ಪರಿಷ್ಕರಿಸಿ ಪರಿಷ್ಕೃತ ಪರಿಶೀಲನಾ ಸಮಿತಿಯನ್ನು ರಚಿಸಲಾಗಿತ್ತು.
4. ಮೇಲೆ (4) ರಲ್ಲಿ ಓದಲಾದ ಅಧಿಸೂಚನೆಯಲ್ಲಿ, ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು 2012 ಅನ್ನು ದಿನಾಂಕ 28.04.2012ರ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.
5. ಈ ವಿಷಯದ ಕುರಿತು ಕಾನೂನು ಇಲಾಖೆಯು ನೀಡಿರುವ ಅಭಿಪ್ರಾಯವನ್ನು ಅವಗಾಹಿಸಲಾಗಿದೆ.

31/7/12

6. ಮೇಲ್ಕಂಡ ಅಂಶಗಳ ಕುರಿತು ಪರಿಶೀಲಿಸಿ ಶಿಕ್ಷಣ ಹಕ್ಕು ಕಾಯ್ದೆಯಡಿ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆ / ಶಾಲೆಗಳೆಂದು ಘೋಷಿಸುವ ಕುರಿತು ಮಾನದಂಡಗಳನ್ನು ನಿಗದಿಪಡಿಸುವ ಬಗ್ಗೆ ಮೇಲೆ ಓದಲಾದ ಎಲ್ಲಾ ಸುತ್ತೋಲೆ / ಅಧಿಸೂಚನೆ/ ತಿದ್ದುಪಡಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಪೂರ್ಣವಾಗಿ ಮಾರ್ಪಡಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 27 ಮಾಹಿತಿ 2012 (ಭಾಗ 1) ಬೆಂಗಳೂರು ದಿನಾಂಕ: 24.07.2012

7. ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಬಗ್ಗೆ ಕೆಳಕಂಡ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

| ಕ್ರ.ಸಂ. | ಅಧೀನ ಇಲಾಖೆಯ ಹಂತದಲ್ಲಿ ಅಧ್ಯಕ್ಷರ ಹೆಸರು | ವಿಭಾಗ/ವಲಯ |
|---|---|---|
| 1 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಬೆಂಗಳೂರು & ಮೈಸೂರು ವಲಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು |
| 2 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ | ವಾಯುವ್ಯ ವಲಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು. |
| 3 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ | ಈಶಾನ್ಯ ವಲಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು |
| 4 | ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಪದವಿ ಪೂರ್ವ ಶಿಕ್ಷಣ ಕಾಲೇಜುಗಳು |

8. ಸದರಿ ಸಮಿತಿಗೆ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ನಿರ್ದೇಶಕರು (ಪ್ರೌಢ ಶಿಕ್ಷಣ) ರವರು ಕ್ರಮವಾಗಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸದಸ್ಯರಾಗಿರುತ್ತಾರೆ. ಆಯಾ ವಿಭಾಗದ ಜಂಟಿ ನಿರ್ದೇಶಕರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

9. ಸದರಿ ಸಮಿತಿಯು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಸ್ಥಾನಮಾನವನ್ನು ನೀಡುವ ಸಂಬಂಧ ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

I. ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ರಿಜಿಸ್ಟ್ರೇಷನ್ ಕಾಯ್ದೆ ಪ್ರಕಾರ ನೊಂದಣಿಯಾಗಿರಬೇಕು ಹಾಗೂ ಕಾಲಕಾಲಕ್ಕೆ ನವೀಕರಿಸಿರತಕ್ಕದ್ದು.

II. ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು ಆಯಾಯ ಭಾಷಾ/ಮತೀಯ ಅಲ್ಪಸಂಖ್ಯಾತ ಸದಸ್ಯರ ಸಂಖ್ಯೆ ಕನಿಷ್ಠ ಮೂರನೇ ಎರಡರಷ್ಟು ಇರಬೇಕು.

III. ಶಾಲೆಗಳನ್ನು ನಡೆಸುವ ಭಾಷಾ/ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು ಆಯಾ ಸದಸ್ಯರು ಸಂಬಂಧಿಸಿದ ತಹಸೀಲ್ದಾರ್ ರವರಿಂದ ಜಾತಿ ಪ್ರಮಾಣ ಪತ್ರ ಪಡೆದಿರಬೇಕು.

IV. ಶೈಕ್ಷಣಿಕ ವರ್ಷದಲ್ಲಿ ಅಲ್ಪಸಂಖ್ಯಾತ ಸಂಸ್ಥೆಯಲ್ಲಿ ಶೇ.75 ಕ್ಕಿಂತ ಕಡಿಮೆ ಇಲ್ಲದಂತೆ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ದಾಖಲಾಗಿರುವುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು.

V. ಸಮಿತಿಯು ಆಗಿಂದಾಗ್ಗೆ ಸಭೆಗಳನ್ನು ನಡೆಸಿ ಇಂತಹ ಎಲ್ಲಾ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸತಕ್ಕದ್ದು.

10. ಡಿ.ಎಡ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಪರಿಶೀಲಿಸಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಬಗ್ಗೆ ಸರ್ಕಾರದ ಹಂತದಲ್ಲಿಯೇ ಕ್ರಮವಹಿಸಲಾಗುವುದು.

11. ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಅಲ್ಪಸಂಖ್ಯಾತ ಶಾಲೆಗಳ ಮಾಹಿತಿಯನ್ನು ಮೇಲ್ಕಂಡ ನಿರ್ದೇಶನದಂತೆ ಮನರ್ ಪರಿಶೀಲಿಸಿ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿರುವ ಮಾಹಿತಿಯ ವರದಿಯನ್ನು ಸರ್ಕಾರಕ್ಕೆ ಕಾಲಕಾಲಕ್ಕೆ ಸಲ್ಲಿಸುವುದು.

12. ಈ ಆದೇಶವನ್ನು ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಾವಳಿ 1977ರ ನಿಯಮ 17 ಉಪನಿಯಮ (2) ರಡಿಯಲ್ಲಿ ಪರುಂತಕದ ವ್ಯಾಪ್ತಿಗೆ ಬರುತ್ತಿದ್ದು ಅದರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)
21/8/2012

ಪ್ರತಿ:

1. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಸರ್ಕಾರದ ಕಾರ್ಯದರ್ಶಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
5. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
6. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ
8. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ/ ಪ್ರೌಢ ಶಿಕ್ಷಣ / ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
9. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
10. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ರವರ ಆಪ್ತ ಕಾರ್ಯದರ್ಶಿಗಳು

Fwd: 27 MAHITI2012.

Srinviasa Murthy K.G

to Shankar, Section, SR, cpi.edu sgkar, DPIMNBAIG, rasmi.venka

Dear sir,

good morning sir.

As per the instructions of the secretary, primary and Secondary education, I am attaching Minority status Govt. Order under RTE fo your kind perusal. I further request to Section officer, e-Governance unit of Public Instruction to host said go in website www.schooleducation.kar.nic.in.

with regards,

Yours faithfully,

K.G.SRINIVASA MURTHY
State e-Governance co-ordinator,
Education department,
MS Building,
Bangalore

27 MAHITI2012.pdf

ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| ವಿಷಯ | ಭಾಷಾ/ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಲು ಮಾನದಂಡಗಳನ್ನು ನಿಗದಿಪಡಿಸುವ ಬಗ್ಗೆ. |
| ಓದಲಾಗಿದೆ | 1. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 5 ಎಸ್‌ಎಂಸಿ 2002 ದಿನಾಂಕ 20.07.2004<br>2. ಸರ್ಕಾರದ ಆದೇಶ ತಿದ್ದೋಲೆ ಸಂಖ್ಯೆ: ಇಡಿ 22 ಎಂಪಿಎಸ್ 2005 ದಿನಾಂಕ 12.12.2006<br>3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 4 ಎಸ್‌ಎಂಸಿ 2005 ದಿನಾಂಕ 11.09.2007<br>4. ಸರ್ಕಾರದ ಆದೇಶ ಸಂಖ್ಯೆ: ಇಡಿ 27 ಮಾಶಿಂತಿ 2012 (ಭಾಗ 1) ದಿನಾಂಕ: 24.07.2012<br>5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪ್ರಸ್ತಾವನೆ ದಿನಾಂಕ 24.04.2014 |

ಪ್ರಸ್ತಾವನೆ:

1. ಮೇಲೆ (1) ರಲ್ಲಿ ಓದಲಾದ ಸುತ್ತೋಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಬಗ್ಗೆ ಪರಿಶೀಲನಾ ಸಮಿತಿಯನ್ನು ರಚಿಸಲಾಗಿತ್ತು ಹಾಗೂ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಸ್ಥಾನಮಾನ ನೀಡುವ ಸಂಬಂಧ "ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡ 50 ರಷ್ಟು ಭಾಷಾ/ಮತೀಯ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ದಾಖಲೆ (admissions) ಮಾಡಿಕೊಳ್ಳತಕ್ಕದ್ದು" ಎನ್ನುವ ಸೂಚನೆ ನೀಡಲಾಗಿತ್ತು.
2. ಮೇಲೆ 2ರಲ್ಲಿ ಓದಲಾದ ತಿದ್ದೋಲೆಯಲ್ಲಿ "ರಾಜ್ಯದಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ ಆಯಾ ಭಾಷಾ / ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ಆಯಾ ಅಲ್ಪಸಂಖ್ಯಾತ ಸಮುದಾಯದ ಜನಗಣತಿಗೆ ತಕ್ಕಂತೆ, ಆಯಾ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಕಾಪಾಡಿಕೊಳ್ಳಲು ಆಯಾಯ ವರ್ಗದ ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ಕನಿಷ್ಠ ಅದೇ ಪ್ರಮಾಣದಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು" ಎಂದು ತಿಳಿಸಲಾಗಿತ್ತು.
3. ಮೇಲೆ (3) ರಲ್ಲಿ ಓದಲಾದ ಅಧಿಸೂಚನೆಯಲ್ಲಿ, ಕರ್ನಾಟಕ ರಾಜ್ಯದಲ್ಲಿನ ಭಾಷಾ/ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಭಾಷಾ/ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಕುರಿತು ಅಗತ್ಯ ಕ್ರಮಕೈಗೊಳ್ಳಲು ಪರಿಷ್ಕರಿಸಿ ಪರಿಷ್ಕೃತ ಪರಿಶೀಲನಾ ಸಮಿತಿಯನ್ನು ರಚಿಸಲಾಗಿತ್ತು.
4. ಮೇಲೆ (4) ರಲ್ಲಿ ಓದಲಾದ ಆದೇಶದಲ್ಲಿ, ಶಿಕ್ಷಣ ಹಕ್ಕು ಕಾಯ್ದೆಯಡಿ ಅಲ್ಪ ಸಂಖ್ಯಾತರ ಶಿಕ್ಷಣ ಸಂಸ್ಥೆ / ಶಾಲೆಗಳೆಂದು ಘೋಷಿಸುವಾಗ ಶೈಕ್ಷಣಿಕ ವರ್ಷದಲ್ಲಿ ಅಲ್ಪಸಂಖ್ಯಾತ ಸಂಸ್ಥೆಯಲ್ಲಿ ಶೇ.75 ಕ್ಕಿಂತ ಕಡಿಮೆ ಇಲ್ಲದಂತೆ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ದಾಖಲಾಗಿರುವುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು ಎಂಬ ಷರತ್ತನ್ನೊಳಗೊಂಡ ಮಾನದಂಡಗಳನ್ನು ನಿಗದಿಪಡಿಸಲಾಗಿತ್ತು.
5. ಮೇಲೆ (5) ರಲ್ಲಿ ಓದಲಾದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಪ್ರಸ್ತಾವನೆಯಲ್ಲಿ ಕರ್ನಾಟಕ ರಾಜ್ಯದಲ್ಲಿನ ಭಾಷಾ/ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಭಾಷಾ/ಮತೀಯ

ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ ಕೆಳಕಂಡ ಅಂಶಗಳನ್ನು ಸೇರಿಸಿ ಪರಿಷ್ಕೃತ ಆದೇಶ ಹೊರಡಿಸಲು ಕೋರಿದ್ದಾರೆ.

ಪರಿಷ್ಕೃತ ಸಮಿತಿ:

| ಕ್ರಸಂ. | ಅಧೀನ ಇಲಾಖೆಯ ಹಂತದಲ್ಲಿ ಅಧ್ಯಕ್ಷರ ಹೆಸರು | ವಿಭಾಗ / ವಲಯ |
|---|---|---|
| 1. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಬೆಂಗಳೂರು & ಮೈಸೂರು ವಲಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು |
| 2 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ | ವಾಯುವ್ಯ ವಲಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು |
| 3 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ | ಈಶಾನ್ಯ ವಲಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು |
| 4 | ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಪದವಿ ಪೂರ್ವ ಶಿಕ್ಷಣ ಕಾಲೇಜುಗಳು |

✓ ನಿರ್ದೇಶಕರು, ಉರ್ದು ಮತ್ತು ಇತರೆ ಭಾಷಾ ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು ಇವರು ಬೆಂಗಳೂರು ಮತ್ತು ಮೈಸೂರು ವಿಭಾಗಕ್ಕೆ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

✓ ಆಯಾಯಾ ಆಯುಕ್ತಾಲಯದಲ್ಲಿರುವ ಜಂಟಿ ನಿರ್ದೇಶಕರು, ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

ಸೂಚನೆಗಳು:

1. ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ರಿಜಿಸ್ಟ್ರೇಷನ್ ಕಾಯ್ದೆ ಪ್ರಕಾರ ನೊಂದಣಿಯಾಗಿರಬೇಕು ಹಾಗೂ ಕಾಲಕಾಲಕ್ಕೆ ನವೀಕರಿಸಿರತಕ್ಕದ್ದು.
2. ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು, ಆಯಾಯ ಭಾಷಾ/ಮತೀಯ ಅಲ್ಪಸಂಖ್ಯಾತ ಸದಸ್ಯರ ಸಂಖ್ಯೆ ಕನಿಷ್ಠ ಮೂರನೇ ಎರಡರಷ್ಟು ಇರಬೇಕು.
3. ಶಾಲೆಗಳನ್ನು ನಡೆಸುವ ಭಾಷ/ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ, ಅಂತಹ ಸದಸ್ಯರು ಸಂಬಂಧಿಸಿದ ತಹಶೀಲ್ದಾರ್ ರವರಿಂದ ಜಾತಿ ಪ್ರಮಾಣ ಪತ್ರ ಪಡೆದಿರಬೇಕು.
4. ಶೈಕ್ಷಣಿಕ ವರ್ಷದಲ್ಲಿ ಅಲ್ಪಸಂಖ್ಯಾತ ಸಂಸ್ಥೆಯಲ್ಲಿ ಶೇ.50 ಕ್ಕಿಂತ ಕಡಿಮೆ ಇಲ್ಲದಂತೆ ಭಾಷಾ/ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ದಾಖಲಾಗಿರುವುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು.
5. ಸಮಿತಿಯು ಆಗಿಂದಾಗ್ಗೆ ಸಭೆಗಳನ್ನು ನಡೆಸಿ ಇಂತಹ ಎಲ್ಲಾ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸತಕ್ಕದ್ದು.

6. ಮೇಲಿನ ಅಂಶಗಳ ಕುರಿತು ಪರಿಶೀಲಿಸಿ, ಪರಿಷ್ಕೃತಗೊಳಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 27 ಮಾಹಿತಿ 2012 (ಭಾಗ 1) ಬೆಂಗಳೂರು ದಿನಾಂಕ: 18.06.2014**

7. ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಬಗ್ಗೆ ಕೆಳಕಂಡಂತೆ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

ಪರಿಷ್ಕೃತ ಸಮಿತಿ:

| ಕ್ರಸಂ. | ಅಧೀನ ಇಲಾಖೆಯ ಹಂತದಲ್ಲಿ ಅಧ್ಯಕ್ಷರ ಹೆಸರು | ವಿಭಾಗ / ವಲಯ |
|---|---|---|
| 1. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಬೆಂಗಳೂರು & ಮೈಸೂರು ವಲಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು ಹಾಗೂ ರಾಜ್ಯದ ಎಲ್ಲ ಡಿಎಡ್ ಕಾಲೇಜುಗಳು |
| 2 | ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ | ವಾಯುವ್ಯ ವಲಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು |
| 3 | ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ | ಈಶಾನ್ಯ ವಲಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳು |
| 4 | ಆಯುಕ್ತರು/ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಪದವಿ ಪೂರ್ವ ಶಿಕ್ಷಣ ಕಾಲೇಜುಗಳು |

- ✓ ನಿರ್ದೇಶಕರು, ಉರ್ದು ಮತ್ತು ಇತರ ಭಾಷಾ ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು ಇವರು ಬೆಂಗಳೂರು ಮತ್ತು ಮೈಸೂರು ವಿಭಾಗಕ್ಕೆ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.
- ✓ ಬೆಂಗಳೂರು ಮತ್ತು ಮೈಸೂರು ವಿಭಾಗದ ಸಮಿತಿಗೆ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ನಿರ್ದೇಶಕರು (ಪ್ರೌಢ ಶಿಕ್ಷಣ) ರವರು ಕ್ರಮವಾಗಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸದಸ್ಯರಾಗಿರುತ್ತಾರೆ.
- ✓ ರಾಜ್ಯದ ಎಲ್ಲ ಡಿಎಡ್ ಕಾಲೇಜುಗಳಿಗೆ ಸಂಬಂಧಿಸಿದಂತೆ, ನಿರ್ದೇಶಕರು, ಡಿಎಸ್ಇಆರ್‌ಟಿ,ರವರು ಸದಸ್ಯರಾಗಿರುತ್ತಾರೆ.
- ✓ ಧಾರವಾಡ ಮತ್ತು ಗುಲ್ಬರ್ಗ ವಿಭಾಗಕ್ಕೆ ಸಂಬಂಧಿಸಿದಂತೆ, ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಕಛೇರಿ, ಧಾರವಾಡ/ ಗುಲ್ಬರ್ಗದ ನಿರ್ದೇಶಕರು ಕ್ರಮವಾಗಿ ಸದಸ್ಯರಾಗಿರುತ್ತಾರೆ. ಆಯಾಯಾ ಆಯುಕ್ತಾಲಯದಲ್ಲಿರುವ ಜಂಟಿ ನಿರ್ದೇಶಕರು, ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.
- ✓ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಜಂಟಿ ನಿರ್ದೇಶಕರು (ಆಡಳಿತ) ರವರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಜಂಟಿ ನಿರ್ದೇಶಕರು (ಶೈಕ್ಷಣಿಕ) ರವರು ಸದಸ್ಯರಾಗಿರುತ್ತಾರೆ.

8. ಸದರಿ ಸಮಿತಿಯು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಸ್ಥಾನಮಾನವನ್ನು ನೀಡುವ ಸಂಬಂಧ ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

1. ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ರಿಜಿಸ್ಟ್ರೇಷನ್ ಕಾಯ್ದೆ ಪ್ರಕಾರ ನೋಂದಣಿಯಾಗಿರಬೇಕು ಹಾಗೂ ಕಾಲಕಾಲಕ್ಕೆ ನವೀಕರಿಸಿರತಕ್ಕದ್ದು.
2. ಶಾಲೆಗಳ, ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು, ಆಯಾಯ ಭಾಷಾ/ಮತೀಯ ಅಲ್ಪಸಂಖ್ಯಾತ ಸದಸ್ಯರ ಸಂಖ್ಯೆ ಕನಿಷ್ಠ ಮೂರನೇ ಎರಡರಷ್ಟು ಇರಬೇಕು.
3. ಶಾಲೆಗಳನ್ನು ನಡೆಸುವ ಭಾಷ/ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ, ಅಂತಹ ಸದಸ್ಯರು ಸಂಬಂಧಿಸಿದ ತಹಶೀಲ್ದಾರ್ ರವರಿಂದ ಜಾತಿ ಪ್ರಮಾಣ ಪತ್ರ ಪಡೆದಿರಬೇಕು.
4. ಅಲ್ಪಸಂಖ್ಯಾತ ಸಂಸ್ಥೆ ಶಾಲೆಗಳೆಂದು ಘೋಷಿಸಲು ಆ ಶಾಲೆಗಳು ಆಯಾ ಶೈಕ್ಷಣಿಕ ವರ್ಷದಲ್ಲಿ ಕಡ್ಡಾಯವಾಗಿ ಕನಿಷ್ಠ ಶೇ.25ರಷ್ಟು ಆಯಾ ಭಾಷಾ/ಆಯಾ ಮತೀಯ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳನ್ನು ಹೊಂದಿರಬೇಕು.
5. ಸಮಿತಿಯು ಆಗಿಂದಾಗ್ಗೆ ಸಭೆಗಳನ್ನು ನಡೆಸಿ ಇಂತಹ ಎಲ್ಲಾ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸತಕ್ಕದ್ದು.

9. ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಅಲ್ಪಸಂಖ್ಯಾತ ಶಾಲೆಗಳ ಮಾಹಿತಿಯನ್ನು ಮೇಲ್ಕಂಡ ನಿರ್ದೇಶನದಂತೆ ಮರು ಪರಿಶೀಲಿಸಿ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿರುವ ಮಾಹಿತಿಯ ವರದಿಯನ್ನು ಸರ್ಕಾರಕ್ಕೆ ಕಾಲಕಾಲಕ್ಕೆ ಸಲ್ಲಿಸುವುದು.

10. ಈ ಆದೇಶವನ್ನು ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಾವಳಿ 1977ರ ನಿಯಮ 17 ಉಪನಿಯಮ (2)ರಡಿಯಲ್ಲಿ ಪರುಂತಕದ ವ್ಯಾಪ್ತಿಗೆ ಬರುತ್ತಿದ್ದು ಅದರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಐ.ಎಫ್.ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

ಪ್ರತಿ:

1. ಸಂಕಲನಕಾರರು, ಕರ್ನಾಟಕ ರಾಜ್ಯ ಗೆಜೆಟ್, ಬೆಂಗಳೂರು ಇವರಿಗೆ ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸಲು ಕೋರಿ
2. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು
3. ಸರ್ಕಾರದ ಕಾರ್ಯದರ್ಶಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
5. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು
6. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
8. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ
9. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ/ ಪ್ರೌಢ ಶಿಕ್ಷಣ / ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

10. ನಿರ್ದೇಶಕರು, ಡಿಎಸ್‌ಇಆರ್‌ಟಿ, ಬೆಂಗಳೂರು
11. ಜಂಟಿ ನಿರ್ದೇಶಕರುಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗ ವಿಭಾಗ ಹಾಗೂ ಜಂಟಿ ನಿರ್ದೇಶಕರು(ಆಡಳಿತ ಮತ್ತು ಶೈಕ್ಷಣಿಕ) ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು
12. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಮಾಹಿತಿಗಾಗಿ ಸಲ್ಲಿಸಿದೆ.
13. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
14. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ರವರ ಆಪ್ತ ಕಾರ್ಯದರ್ಶಿಗಳು

# ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| ವಿಷಯ | ಭಾಷಾ/ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಲು ಮಾನದಂಡಗಳನ್ನು ನಿಗದಿಪಡಿಸುವ ಬಗ್ಗೆ. |
| ಓದಲಾಗಿದೆ | ಸರ್ಕಾರದ ಆದೇಶ ಸಂಖ್ಯೆ: ಇಡಿ 27 ಮಾಹಿತಿ 2012 (ಭಾಗ 1) ಬೆಂಗಳೂರು ದಿನಾಂಕ: 18.06.2014 |

❁❁❁❁❁

1. ಮೇಲೆ (1) ರಲ್ಲಿ ಓದಲಾದ ಸುತ್ತೋಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಭಾಷ/ ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಬಗ್ಗೆ ಪರಿಶೀಲನಾ ಸಮಿತಿಯನ್ನು ರಚಿಸಲಾಗಿತ್ತು ಹಾಗೂ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಸ್ಥಾನಮಾನ ನೀಡುವ ಸಂಬಂಧ "ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡ 25 ರಷ್ಟು ಭಾಷಾ/ಮತೀಯ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ದಾಖಲೆ (admissions) ಮಾಡಿಕೊಳ್ಳತಕ್ಕದ್ದು" ಎನ್ನುವ ಸೂಚನೆ ನೀಡಲಾಗಿದೆ.
2. ಅದಲ್ಲದೆ ಕರ್ನಾಟಕ ರಾಜ್ಯದಲ್ಲಿನ ಭಾಷಾ/ಮತೀಯ ಅಲ್ಪಸಂಖ್ಯಾತರುಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳನ್ನು ಭಾಷಾ/ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಕುರಿತು ಅಗತ್ಯ ಕ್ರಮಕೈಗೊಳ್ಳಲು ಪರಿಷ್ಕರಿಸಿ ಪರಿಷ್ಕೃತ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.
3. ಈ ಆದೇಶದಂತೆ ಕೆಲವು ಭಾಷ/ ಮತೀಯ ಅಲ್ಪಸಂಖ್ಯಾತ ಶಿಕ್ಷಣಗಳು ಮಾತ್ರ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಸ್ಥಾನಮಾನ ಪಡೆಯುವ ಸಾಧ್ಯತೆಗಳು ಇರುವುದು ಸಾಮಾನ್ಯವಾಗಿರುವುದು ಕಂಡುಬರುತ್ತಿರುವುದರಿಂದ ಈ ಮಾನದಂಡಗಳನ್ನು ಕ್ಷೇತ್ರ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಮಾಡುವಾಗ ಬರುವ ಸಾಧಕ ಬಾಧಕಗಳನ್ನು ವಿವರವಾಗಿ ಅಧ್ಯಯನ ಮಾಡುವುದರ ಅಗತ್ಯವಾಗಿದೆ.
4. ಈ ಹಿನ್ನೆಲೆಯಲ್ಲಿ ಮೇಲೆ ಮೇಲಿನ ಅಂಶಗಳನ್ನು ವಿವರವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

JD(R&G) DA-1184

**ಸರ್ಕಾರಿ ಆದೇಶ ಸಂಖ್ಯೆ: ಇಡಿ 123 ಮಾಹಿತಿ 2014, ಬೆಂಗಳೂರು ದಿನಾಂಕ: 02.07.2014**

5. ಕರ್ನಾಟಕ ರಾಜ್ಯದಲ್ಲಿ ಭಾಷ/ ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ ನೀಡಿರುವ ಮಾನದಂಡಗಳನ್ನು ಕ್ಷೇತ್ರ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಮಾಡುವಾಗ ಬರುವ ಸಾಧಕ ಬಾಧಕಗಳನ್ನು ವಿವರವಾಗಿ ಅಧ್ಯಯನ ಮಾಡಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ 5 ಜನರ ತಜ್ಞರ ಸಮಿತಿಯನ್ನು ರಚಿಸಿಕೊಂಡು ರಚನಾತ್ಮಕವಾಗಿ ಅಧ್ಯಯನ ಮಾಡಿ 3 ತಿಂಗಳ ಒಳಗಾಗಿ ಸರ್ಕಾರಕ್ಕೆ ಸಮಿತಿಯು ಸ್ಪಷ್ಟ ಅಭಿಪ್ರಾಯಗಳೊಂದಿಗೆ ವರದಿಯನ್ನು ಸಲ್ಲಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸೂಚಿಸಿದೆ.

6. ಸದರಿ ಸಮಿತಿಗೆ 5 ಜನರ ತಜ್ಞರನ್ನು ನಾಮನಿರ್ದೇಶನ ಮಾಡಿಕೊಳ್ಳಲು ಆಯುಕ್ತರಿಗೆ ಅನುಮತಿಸಿದೆ. ಸದರಿ ಸಮಿತಿಗೆ ನಾಮನಿರ್ದೇಶನ ಮಾಡುವ ಸರ್ಕಾರೇತರ ತಜ್ಞರಿಗೆ ನಿಯಮಾನುಸಾರ ಸಭಾ ಭತ್ಯೆಯನ್ನು ನೀಡಲು ಅನುಮತಿಸಿದೆ.

2/7/2014

7. ಸದರಿ ಸಮಿತಿಯು ಇತರೆ ರಾಜ್ಯಗಳಲ್ಲಿನ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ ಇರುವ ಆದೇಶಗಳನ್ನು / ಎಲ್ಲಾ ಸಂತದ ನ್ಯಾಯಾಲಯಗಳಲ್ಲಿ ನೀಡಿರುವ ಆದೇಶಗಳನ್ನು ಅವಲೋಕಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಪಿ.ಎಫ್.ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)
2014

ಪ್ರತಿ:

1. ಸಂಕಲನಕಾರರು, ಕರ್ನಾಟಕ ರಾಜ್ಯ ಗೆಜೆಟ್, ಬೆಂಗಳೂರು ಇವರಿಗೆ ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸಲು ಕೋರಿ
2. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು
3. ಸರ್ಕಾರದ ಕಾರ್ಯದರ್ಶಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
5. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು
6. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
7. ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
8. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
9. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ
10. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ/ ಪ್ರೌಢ ಶಿಕ್ಷಣ / ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
11. ನಿರ್ದೇಶಕರು, ಡಿಎಸ್ಇಆರ್‌ಟಿ, ಬೆಂಗಳೂರು
12. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಮಾಹಿತಿಗಾಗಿ ಸಲ್ಲಿಸಿದೆ.
13. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತ ಭಾಷೆಗಳನ್ನು ಗುರುತಿಸಿ ಅಧಿಸೂಚಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಇಡಿ 27 ಮಾಹಿತಿ 2012 (ಭಾಗ-1), ಬೆಂಗಳೂರು, ದಿನಾಂಕ: 18/06/2014.
2. ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ, ಭಾರತ ಸರ್ಕಾರ, ಇವರ ಅಧಿಸೂಚನೆ ಸಂಖ್ಯೆ: ಡಿ.ಎಲ್.33004/99, ಭಾಗ-2, ವಿಭಾಗ-3, ಉಪವಿಭಾಗ-2, ದಿನಾಂಕ: 27/01/2014.
3. ಜಸ್ಟೀಸ್ ರಂಗನಾಥ ಮಿಶ್ರ, ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು ಹಾಗೂ ಅಧ್ಯಕ್ಷರು, ರಾಷ್ಟ್ರೀಯ ಮತೀಯ ಮತ್ತು ಭಾಷಾ ಅಲ್ಪಸಂಖ್ಯಾತರ ಆಯೋಗ, ಭಾರತ ಸರ್ಕಾರ, ಇವರು ದಿನಾಂಕ:10/05/2007 ರಂದು ನೀಡಿರುವ ವರದಿ.
4. ಕರ್ನಾಟಕ ಘನ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 32825/2017ಗೆ ಸಂಬಂಧಿಸಿದಂತೆ ದಿನಾಂಕ:21/08/2018 ರಂದು ಹೊರಡಿಸಿರುವ ಮಧ್ಯಂತರ ಆದೇಶ.

## ಪ್ರಸ್ತಾವನೆ:

1. ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರಿ ಆದೇಶದಲ್ಲಿ ಶೇ. 25ರಷ್ಟು ಆಯಾ ಭಾಷಾ/ಆಯಾ ಮತೀಯ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳನ್ನು ಹೊಂದಿರುವ ಮತ್ತು ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು, ಆಯಾಯ ಭಾಷಾ/ಮತೀಯ ಅಲ್ಪಸಂಖ್ಯಾತ ಸದಸ್ಯರ ಸಂಖ್ಯೆ ಕನಿಷ್ಠ ಮೂರನೇ ಎರಡರಷ್ಟು ಹೊಂದಿರುವ ಶಾಲೆಗಳನ್ನು ರಾಜ್ಯದಲ್ಲಿ ಭಾಷಾ ಮತ್ತು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಣೆ ಮಾಡಲು ಆದೇಶಿಸಲಾಗಿರುತ್ತದೆ.

2. ಮೇಲೆ ಓದಲಾದ ಕ್ರಮಾಂಕ (2)ರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಭಾರತ ಸರ್ಕಾರ, ಇವರ ದಿನಾಂಕ: 27/01/2014ರ ಅಧಿಸೂಚನೆಯಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಬುದ್ಧ, ಪಾರ್ಸಿ ಮತ್ತು ಜೈನ್ ಸಮುದಾಯಗಳನ್ನು ಮತೀಯ ಅಲ್ಪಸಂಖ್ಯಾತರೆಂದು ಘೋಷಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಆದರೆ ವಿವಿಧ ರಾಜ್ಯಗಳಲ್ಲಿ ನೆಲಸಿರುವ ಭಾಷಾ ಅಲ್ಪಸಂಖ್ಯಾತರನ್ನು ಕೇಂದ್ರ ಸರ್ಕಾರವಾಗಲಿ ಅಥವಾ ಸಂಬಂಧಿಸಿದ ರಾಜ್ಯ ಸರ್ಕಾರವಾಗಲಿ ಗುರುತಿಸಿ ಅಧಿಸೂಚನೆ ಹೊರಡಿಸಿರುವುದಿಲ್ಲ.

3. ಕರ್ನಾಟಕ ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತರನ್ನು ಗುರುತಿಸಿ ಅಧಿಸೂಚನೆ ಹೊರಡಿಸದೆ ಇರುವುದರಿಂದ ಖಾಸಗಿ ಶಾಲೆಗಳ ಆಡಳಿತ ಮಂಡಳಿಯವರು ಆರ್.ಟಿ.ಇ ಇಂದ ವಿನಾಯಿತಿ ಪಡೆಯಲು ಕರ್ನಾಟಕ ಘನ ಉಚ್ಛ ನ್ಯಾಯಾಲಯದ ಮೊರೆ ಹೋಗಿ ಆರ್.ಟಿ.ಇ ಇಂದ ವಿನಾಯಿತಿ ನೀಡುವಂತೆ ಕೋರಿರುತ್ತಾರೆ. ಅದರಂತೆ ಘನ ಉಚ್ಛ ನ್ಯಾಯಾಲಯವು ಕೆಲವು ಪ್ರಕರಣಗಳಲ್ಲಿ ಖಾಸಗಿ ಶಾಲೆಗಳ ಆಡಳಿತ ಮಂಡಳಿಯವರಿಗೆ ಆರ್.ಟಿ.ಇ ಇಂದ ವಿನಾಯಿತಿ ನೀಡಿ ಮಧ್ಯಂತರ ಆದೇಶ ನೀಡಿರುತ್ತದೆ.

4. ಮೇಲೆ ಓದಲಾದ (3)ರ ವರದಿಯಲ್ಲಿ ಜಸ್ಟೀಸ್ ರಂಗನಾಥ ಮಿಶ್ರ, ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು ಹಾಗೂ ಅಧ್ಯಕ್ಷರು, ಮತೀಯ ಮತ್ತು ಭಾಷಾ ಅಲ್ಪಸಂಖ್ಯಾತರ ಆಯೋಗ, ಭಾರತ ಸರ್ಕಾರ, ಇವರು ದೇಶದ ವಿವಿಧ ರಾಜ್ಯಗಳಲ್ಲಿರುವ ಭಾಷಾ ಅಲ್ಪಸಂಖ್ಯಾತರನ್ನು ಗುರುತಿಸಿ ವರದಿ ನೀಡಿರುತ್ತಾರೆ. ಅದರಂತೆ ಕರ್ನಾಟಕ ರಾಜ್ಯದಲ್ಲಿ ಉರ್ದು, ತೆಲಗು, ತಮಿಳು, ಮಲಯಾಳಂ, ಮರಾಠಿ, ತುಳು, ಲಮಾಣಿ, ಹಿಂದಿ, ಕೊಂಕಣಿ ಮತ್ತು ಗುಜರಾತಿ ಭಾಷೆಗಳನ್ನು ಅಲ್ಪಸಂಖ್ಯಾತ ಭಾಷೆಗಳೆಂದು ಗುರುತಿಸಿರುತ್ತಾರೆ.

5. ಮೇಲೆ ಓದಲಾದ ಕ್ರಮಾಂಕ (4)ರ ರಿಟ್ ಪಿಟಿಷನ್ ಸಂಖ್ಯೆ 32825/2017 ಪ್ರಕರಣದಲ್ಲಿ ಕರ್ನಾಟಕ ಘನ ಉಚ್ಛ ನ್ಯಾಯಾಲಯವು ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ದಿನಾಂಕ:22/02/2018ರ ಮಧ್ಯಂತರ ಆದೇಶದಲ್ಲಿ ಜಸ್ಟೀಸ್ ರಂಗನಾಥ ಮಿಶ್ರ, ಇವರ ದಿನಾಂಕ: 10/05/2007ರ ವರದಿ ಅನ್ವಯ ಕರ್ನಾಟಕ ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತರನ್ನು ಗುರುತಿಸಿ ದಿನಾಂಕ:14/03/2018ರೊಳಗೆ ಅಧಿಸೂಚನೆ ಹೊರಡಿಸುವಂತೆ ಆದೇಶಿಸಿರುತ್ತದೆ. ಈ ಸಂಬಂಧ ಭಾರತ ಸರ್ಕಾರದ ಪರವಾಗಿ ದಿನಾಂಕ: 19/03/2018 ರಂದು ಜ್ಞಾಪನ ಸಲ್ಲಿಸಿರುವ ಸರ್ಕಾರಿ ವಕೀಲರು, ಕರ್ನಾಟಕ ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತರನ್ನು ಗುರುತಿಸುವ ಕಾರ್ಯ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲವೆಂದು ಹಾಗೂ ಭಾಷಾ ಅಲ್ಪಸಂಖ್ಯಾತರನ್ನು ಗುರುತಿಸುವ ಕಾರ್ಯವು ರಾಜ್ಯ ಸರ್ಕಾರದ್ದಾಗಿದೆ ಎಂದು ತಿಳಿಸಿರುತ್ತಾರೆ. ಕೇಂದ್ರ ಸರ್ಕಾರವು ಸಲ್ಲಿಸಿರುವ ಜ್ಞಾಪನದ ಆಧಾರದ ಮೇಲೆ ಕರ್ನಾಟಕ ಘನ ಉಚ್ಛ ನ್ಯಾಯಾಲಯವು ದಿನಾಂಕ:21/08/2018ರ ಮಧ್ಯಂತರ ಆದೇಶದಲ್ಲಿ ಜಸ್ಟೀಸ್ ರಂಗನಾಥ ಮಿಶ್ರ, ಇವರು ದಿನಾಂಕ:10/05/2007 ರಂದು ನೀಡಿರುವ ವರದಿಯಂತೆ ಕರ್ನಾಟಕ ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತರನ್ನು ಗುರುತಿಸಿ 3 ತಿಂಗಳೊಳಗೆ ಆದೇಶ ಹೊರಡಿಸುವಂತೆ ಆದೇಶಿಸಿರುತ್ತದೆ.

6. ಮೇಲ್ಕಂಡ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 226 ಮಾಹಿತಿ 2018, ಬೆಂಗಳೂರು, ದಿನಾಂಕ: 05.11.2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಜಸ್ಟೀಸ್ ರಂಗನಾಥ ಮಿಶ್ರ, ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು ಹಾಗೂ ಅಧ್ಯಕ್ಷರು, ಮತೀಯ ಮತ್ತು ಭಾಷಾ ಅಲ್ಪಸಂಖ್ಯಾತರ ಆಯೋಗ, ಭಾರತ ಸರ್ಕಾರ, ಇವರು ದಿನಾಂಕ: 10/05/2007ರಲ್ಲಿ ನೀಡಿರುವ ವರದಿಯಲ್ಲಿ ಉಲ್ಲೇಖಿಸಲಾಗಿರುವ "ಉರ್ದು, ತೆಲುಗು, ತಮಿಳು, ಮಲಯಾಳಂ, ಮರಾಠಿ, ತುಳು, ಲಮಾಣಿ, ಹಿಂದಿ, ಕೊಂಕಣಿ ಮತ್ತು ಗುಜರಾತಿ" ಭಾಷೆಗಳನ್ನು ಅಲ್ಪಸಂಖ್ಯಾತ ಭಾಷೆಗಳೆಂದು ಅಧಿಸೂಚಿಸಿ ಆದೇಶಿಸಿದೆ.

ಸದರಿ ಆದೇಶವು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಸಂಬಂಧಿಸಿದ ಅಲ್ಪಸಂಖ್ಯಾತ ಭಾಷಾ ಶಾಲೆಗಳನ್ನು ಘೋಷಣೆ ಮಾಡುವ ಉದ್ದೇಶಕ್ಕೆ ಮಾತ್ರ ಸೀಮಿತವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

5/11/18

(ಎಸ್.ಆರ್.ಎಸ್.ನಾಥನ್)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು–ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ಒದಗಿಸುವಂತೆ ಕೋರಿದೆ.

ಪ್ರತಿ:

1. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.

5. ಅಡ್ವೋಕೇಟ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
6. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
7. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
8. ನಿರ್ದೇಶಕರು, ಉರ್ದು ಮತ್ತು ಇತರ ಅಲ್ಪಸಂಖ್ಯಾತ ಶಾಲೆಗಳ ನಿರ್ದೇಶನಾಲಯ, ಆಯುಕ್ತರ ಕಛೇರಿ, ಬೆಂಗಳೂರು.
9. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.
10. ಕಛೇರಿ ಪ್ರತಿ.

ಮಾಹಿತಿಗಾಗಿ:

1. ಮಾನ್ಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

10. ನಿರ್ದೇಶಕರು, ಡಿಎಸ್‌ಇಆರ್‌ಟಿ, ಬೆಂಗಳೂರು
11. ಜಂಟಿ ನಿರ್ದೇಶಕರುಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗ ವಿಭಾಗ ಹಾಗೂ ಜಂಟಿ ನಿರ್ದೇಶಕರು(ಆಡಳಿತ ಮತ್ತು ಶೈಕ್ಷಣಿಕ) ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು
12. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಮಾಹಿತಿಗಾಗಿ ಸಲ್ಲಿಸಿದೆ.
13. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
14. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ರವರ ಆಪ್ತ ಕಾರ್ಯದರ್ಶಿಗಳು

# ಅನುಬಂಧ–1

**ಬೆಂಗಳೂರು ಮತ್ತು ಮೈಸೂರು ವಿಭಾಗದ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ, ಪ್ರೌಢ ಶಾಲೆ ಹಾಗೂ ರಾಜ್ಯದ ಎಲ್ಲ ಡಿ.ಎಡ್ ಕಾಲೇಜುಗಳನ್ನು ಧಾರ್ಮಿಕ ಅಥವಾ ಭಾಷಾ ಅಲ್ಪಸಂಖ್ಯಾತ ಶಾಲಾ/ಡಿ.ಎಡ್ ಕಾಲೇಜುಗಳೆಂದು, ಘೋಷಿಸುವ ಕುರಿತು ಆಡಳಿತ ಮಂಡಳಿಯವರು ಪ್ರಸ್ತಾವನೆಯೊಂದಿಗೆ ಸಲ್ಲಿಸಿರುವ ದಾಖಲೆಗಳ ಪರಿಶೀಲನಾ ವಿವರದ ಪಟ್ಟಿ.**

(ಘೋಷಣೆ/ನವೀಕರಣಕ್ಕಾಗಿ)

| ಕ್ರಸಂ | ವಿಷಯ | ವಿವರ |
|---|---|---|
| 1 | ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸ (ದಪ್ಪ ಅಕ್ಷರಗಳಲ್ಲಿ) | |
| 2 | ಅ) ಶಾಲೆಯ ಹೆಸರು ಮತ್ತು ವಿಳಾಸ<br>ಆ) ಪ್ರಾರಂಭವಾದ ದಿನಾಂಕ:<br>ಇ)ಬೋಧನಾ ಮಾಧ್ಯಮ:<br>ಈ)ಶಾಲೆಯ ಡೈಸ್ ಕೋಡ್: | |
| 3 | ಶಾಲೆಯಲ್ಲಿ ಬೋಧಿಸುತ್ತಿರುವ ಪಠ್ಯಕ್ರಮದ ವಿವರ (ರಾಜ್ಯ/ಕೇಂದ್ರ ಪಠ್ಯಕ್ರಮದ ವಿವರ ಮತ್ತು ದಾಖಲೆಗಳನ್ನು ಲಗತ್ತಿಸುವುದು) | |
| 4 | ಶಾಲೆಯು ಸಂಯುಕ್ತ ಪ್ರೌಢಶಾಲೆಯಾಗಿದ್ದಲ್ಲಿ ಒಂದೇ ಪ್ರಸ್ತಾವನೆಯನ್ನು ಸಲ್ಲಿಸುವುದು. ಇಲ್ಲವಾದಲ್ಲಿ ಪ್ರಾಥಮಿಕ, ಪ್ರೌಢ ಶಾಲೆ ಹಾಗೂ ಡಿ.ಎಡ್. ಕಾಲೇಜಿಗೆ ಪ್ರಸ್ತಾವನೆಯನ್ನು ಪ್ರತ್ಯೇಕವಾಗಿ ಸಲ್ಲಿಸುವುದು. | |
| 5 | ಅ) ಆಡಳಿತ ಮಂಡಳಿಯಿಂದ ನಡೆಸಲಾಗುತ್ತಿರುವ ಶಾಲಾ/ಡಿ.ಎಡ್. ಕಾಲೇಜನ್ನು ಹಿಂದೆ ಭಾಷಾ/ಮತೀಯ ಅಲ್ಪಸಂಖ್ಯಾತ ಶಾಲಾ/ಕಾಲೇಜು ಎಂದು ಘೋಷಿಸಲಾಗಿದೆಯೇ?<br>ಆ) ಘೋಷಿಸಲಾಗಿದ್ದಲ್ಲಿ, ಅಲ್ಪಸಂಖ್ಯಾತ ಘೋಷಣಾ ಆದೇಶದ ಪ್ರತಿ ಲಗತ್ತಿಸುವುದು: | |
| 6 | ಅ) ಆಡಳಿತ ಮಂಡಳಿಯು ನೋಂದಾಯಿಸಲ್ಪಟ್ಟಿದೆಯೇ?<br>ಹೌದಾದರೆ ನೋಂದಣಿ ಸಂಖ್ಯೆ ಮತ್ತು ದಿನಾಂಕ:<br>ಆ) ನೋಂದಣಿಯ ಪ್ರತಿಯನ್ನು ಹಾಗೂ ಬೈಲಾಗಳನ್ನು ಲಗತ್ತಿಸುವುದು.<br>ಇ) ಆಡಳಿತ ಮಂಡಳಿ ನೋಂದಣಿಯುನ್ನು ಪ್ರಸಕ್ತ ಶೈಕ್ಷಣಿಕ ವರ್ಷದವರೆಗೆ ನವೀಕರಿಸಲಾಗಿದೆಯೇ?<br>ಈ) ನವೀಕರಿಸಲಾಗದ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆಯೇ? | |
| 7 | ಅ) ಶಾಲಾ ಮಾನ್ಯತೆ ಪಡೆಯಲಾಗಿದೆಯೇ? (ಶಾಲಾ ಮಾನ್ಯತೆಯ ಪ್ರತಿ ಲಗತ್ತಿಸುವುದು).<br>ಆ) ಈ ದಿನಾಂಕದವರೆವಿಗೂ ಶಾಲಾ ಮಾನ್ಯತೆ | |

| | | |
|---|---|---|
| | ನವೀಕರಿಸಲಾಗಿದೆಯೇ? ನವೀಕರಿಸಲಾಗದ ಪ್ರತಿ ಲಗತ್ತಿಸುವುದು. | |
| 8 | ಆಡಳಿತ ಮಂಡಳಿಯ ಸ್ವರೂಪ: ಧಾರ್ಮಿಕ (ಕ್ರಿಶ್ಚಿಯನ್/ ಮುಸಲ್ಮಾನರು /ಬೌದ್ಧರು /ಸಿಖ್ಖರು/ ಜೈನರು)<br><br>ಅಥವಾ<br><br>ಭಾಷಾ ಅಲ್ಪಸಂಖ್ಯಾತರು (ಸ್ಪಷ್ಟವಾಗಿ ಭಾಷೆ ನಮೂದಿಸುವುದು) | |
| 9 | ಮೂರನೆ ಎರಡು ಭಾಗದಷ್ಟು ಆಡಳಿತ ಮಂಡಳಿಯ ಸದಸ್ಯರು ಆಯಾ ಅಲ್ಪಸಂಖ್ಯಾತ ಗುಂಪಿಗೆ ಸೇರಿಯವರೆ? ಪ್ರಸ್ತುತ ಸಾಲಿನ ಆಡಳಿತ ಮಂಡಳಿಯ ಸದಸ್ಯರ ವಿವರವಾದ ಪಟ್ಟಿ ನೀಡುವುದು. | |
| 10 | ಅ) ಆಡಳಿತ ಮಂಡಳಿಯ ಸದಸ್ಯರು ಧಾರ್ಮಿಕ ಅಲ್ಪಸಂಖ್ಯಾತರ ಗುಂಪಿಗೆ ಸೇರಿಯವರೇ? ಹಾಗಿದ್ದಲ್ಲಿ ಸದಸ್ಯರ ಹೆಸರು, ವಿಳಾಸ & ಧರ್ಮದ ಪೂರ್ಣ ವಿವರವಾದ ಪಟ್ಟಿ ಸಲ್ಲಿಸುವುದು.<br>ಅಥವಾ<br>ಆ) ಆಡಳಿತ ಮಂಡಳಿಯ ಸದಸ್ಯರು ಭಾಷಾ ಅಲ್ಪಸಂಖ್ಯಾತ ಗುಂಪಿಗೆ ಸೇರಿಯವರೇ? ಹಾಗಿದ್ದಲ್ಲಿ ಸದಸ್ಯರ ಹೆಸರು, ವಿಳಾಸ & ಭಾಷೆಯ ಪೂರ್ಣ ವಿವರವಾದ ಪಟ್ಟಿ ಸಲ್ಲಿಸುವುದು. | |
| 11 | ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ (ಧಾರ್ಮಿಕ/ಭಾಷಾ) ಪ್ರತಿಯೊಬ್ಬರು ಪ್ರತ್ಯೇಕವಾಗಿ ತಹಶೀಲ್ದಾರ್ ಇವರಿಂದ ಪಡೆದು, ದೃಢೀಕರಿಸಿದ ಜಾತಿ ಪ್ರಮಾಣ ಪತ್ರದ ಪ್ರತಿಯನ್ನು ಲಗತ್ತಿಸುವುದು. | |
| 12 | ಘೋಷಣೆಗೆ ಸಂಬಂಧ ಪಟ್ಟ ಶಾಲೆ/ಡಿ.ಎಡ್ ಕಾಲೇಜಿನ ವಿಧ: (ಅನುದಾನಿತ ಅಥವಾ ಅನುದಾನ ರಹಿತ) [ಪ್ರತಿಯನ್ನು ಲಗತ್ತಿಸುವುದು]. | |
| 13 | ಅ) ದಾಖಲಾತಿ ವಹಿಯಲ್ಲಿರುವಂತೆ, ಪ್ರಸ್ತುತ ಶೈಕ್ಷಣಿಕ ಸಾಲಿನ ತರಗತಿವಾರು ವಿದ್ಯಾರ್ಥಿಗಳ ಧರ್ಮ ಅಥವಾ ಭಾಷೆ ನಮೂದಿಸಿರುವ, ದೃಢೀಕರಿಸಿದ ವಿದ್ಯಾರ್ಥಿಗಳ ಪಟ್ಟಿ ಲಗತ್ತಿಸಲಾಗಿದೆಯೇ?<br><br>ಆ)ಪ್ರಸ್ತುತ ಸಾಲಿನಲ್ಲಿ ವಿದ್ಯಾರ್ಥಿಗಳ ಒಟ್ಟು ದಾಖಲಾತಿ ಎಷ್ಟು?<br><br>ಇ)ಪ್ರಸ್ತುತ ಸಾಲಿನಲ್ಲಿ ಸದರಿ ಅಲ್ಪಸಂಖ್ಯಾತ ವಿದ್ಯಾರ್ಥಿಗಳ<br><br>1. ಸಂಖ್ಯೆ ಎಷ್ಟು?<br><br>2. ಶೇಕಡ ಎಷ್ಟು? | |

14 ಘೋಷಣೆಗೆ ಸಂಬಂಧಿಸಿದ ಆಯಾ ಮತೀಯ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ವಿವರ (ಶೈಕ್ಷಣಿಕ ವರ್ಷದ ಮಾಹಿತಿ)

| ಮುಸ್ಲಿಂ | ಕ್ರಿಶ್ಚಿಯನ್ | ಬೌದ್ಧರು | ಸಿಖ್ಖರು | ಜೈನರು | ಇತರೆ | ಒಟ್ಟು | ಘೋಷಣೆ | ಶೇಕಡ |
|---|---|---|---|---|---|---|---|---|
| | | | | | | | | |

| | |
|---|---|
| | ಘೋಷಣೆಗೆ ಸಂಬಂಧಿಸಿದ ಆಯಾ ಭಾಷಾ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ವಿವರ (ಶೈಕ್ಷಣಿಕ ವರ್ಷದ ಮಾಹಿತಿ) |

| ತೆಲುಗು | ತಮಿಳು | ಮಲೆಯಾಳಂ | ಕೊಂಕಣಿ | ಮರಾಠಿ | ತುಳು | ಇತರೆ | ಒಟ್ಟು | ಘೋಷಣೆ | ಕನ್ನಡ |
|---|---|---|---|---|---|---|---|---|---|
| | | | | | | | | | |

| | |
|---|---|
| 15 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರ ಖಚಿತ ಶಿಫಾರಸ್ಸು (ಸ್ಪಷ್ಟವಾಗಿ ನಮೂದಿಸಿ ಸಹಿ ಮತ್ತು ಮೊಹರಿನೊಂದಿಗೆ) |
| 16<br>0 | ಉಪನಿರ್ದೇಶಕರು(ಆಡಳಿತ) ಇವರ ಖಚಿತ ಶಿಫಾರಸ್ಸು (ಸ್ಪಷ್ಟವಾಗಿ ನಮೂದಿಸಿ ಸಹಿ ಮತ್ತು ಮೊಹರಿನೊಂದಿಗೆ) |

ಪರಿಶೀಲನಾ ಪಟ್ಟಿಯಲ್ಲಿನ ಎಲ್ಲಾ ವಿವರಗಳನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಿ, ದೃಢೀಕರಿಸಿರುವುದನ್ನು ಪರಿಶೀಲಿಸಿರುತ್ತೇನೆ. ಆಡಳಿತ ಮಂಡಳಿಯು, ಸರ್ಕಾರದ ಆದೇಶದ ಸಂಖ್ಯೆ: ಇಡಿ 27 ಮಾಹಿತಿ 2012(ಭಾಗ-1) ಬೆಂಗಳೂರು ದಿನಾಂಕ:18.06.2014ರ ಎಲ್ಲಾ ಷರತ್ತುಗಳನ್ನು ಪಾಲಿಸಿರುವುದನ್ನು ಈ ಮೂಲಕ ದೃಢೀಕರಿಸುತ್ತೇನೆ.

ಉಪನಿರ್ದೇಶಕರು(ಆಡಳಿತ)
ಸಹಿ ಮೊಹರಿನೊಂದಿಗೆ
ದಿನಾಂಕ:

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಸಹಿ ಮೊಹರಿನೊಂದಿಗೆ
ದಿನಾಂಕ:

"ನಿರ್ದೇಶಕರು/ಕಾರ್ಯದರ್ಶಿಯವರ ಶಿಫಾರಸ್ಸು"

ಉಪನಿರ್ದೇಶಕರು ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿದೆ ______________________ ಯನ್ನು ಧಾರ್ಮಿಕ/ಭಾಷಾ ಅಲ್ಪಸಂಖ್ಯಾತ ಶಾಲೆ ಎಂದು ಘೋಷಿಸಲು/ಘೋಷಿಸದಿರಲು ಸಮಿತಿಗೆ ಮಂಡಿಸಿದೆ.

ನಿರ್ದೇಶಕರು/ಸದಸ್ಯ ಕಾರ್ಯದರ್ಶಿ
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ
ಶಾಲೆಗಳ ನಿರ್ದೇಶನಾಲಯ ಬೆಂಗಳೂರು-01.

ಅನುಬಂಧ-ಬಿ

ರಾಜ್ಯದ ಖಾಸಗಿ ಅನುದಾನಿತ / ಅನಿದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಭಾಷಿಕ / ಧಾರ್ಮಿಕ / ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಬಗ್ಗೆ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಕಾಲೇಜಿನ ಹೆಸರು | ಭಾಷಿಕ / ಧಾರ್ಮಿಕ / ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗೆ ಅರ್ಜಿ ಸಲ್ಲಿಸಿದ ದಿನಾಂಕ | ಭಾಷಿಕ / ಧಾರ್ಮಿಕ / ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗೆ ಘೋಷಣೆಗೆ ಅರ್ಜಿ ಸಲ್ಲಿಸಲಾಗಿದೆಯೇ? | ಭಾಷಿಕ / ಧಾರ್ಮಿಕ / ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗೆ ಘೋಷಣೆ ಮಾಡಲಾಗಿದೆಯೇ | | ಒಂದು ವೇಳೆ ಕಡತ ಚಾಲನೆಯಲ್ಲಿದ್ದು, ಆಕ್ಷೇಪಣಾ ಪತ್ರ / ಹಿಂಬರಹ / ತಿರಸ್ಕರಿಸಿದ್ದಲ್ಲಿ, ಹಿಂಬರಹ, ಆಕ್ಷೇಪಣಾ ಪತ್ರ ,ತಿರಸ್ಕರಿಸಿದ ದಿನಾಂಕ |
|---|---|---|---|---|---|---|---|
| | | | | | ಹೌದಾದ್ದಲ್ಲಿ ಘೋಷಣೆ ಮಾಡಿದ ದಿನಾಂಕ | ಇಲ್ಲದ್ದಿದಲ್ಲಿ ಘೋಷಣೆ ಮಾಡದಿರುವ ಕಾರಣ | |
| 1 | BANGALORE NORTH | ಸಂತ ಜೋಸೇಫ್ಸ್ ಇಂಡಿಯನ್ ಸಂಯುಕ್ತ ಪದವಿ ಪೂರ್ವ ಕಾಲೇಜು, ನಂ.23, ವಿಠ್ಠಲಮಲ್ಯ ರಸ್ತೆ, ಬೆಂಗಳೂರು | 01.01.2021 | ಧಾರ್ಮಿಕ | -- | ಆಕ್ಷೇಪಣೆಗಳಿವೆ | ನೀಡಿರುವುದಿಲ್ಲ |
| 2 | BANGALORE NORTH | ಸಂತ ಜೋಸೇಫ್ಸ್ ಪದವಿ ಪೂರ್ವ ಕಾಲೇಜು, ಕೆ ಎಂ ಕಾರ್ಯಪ್ಪ ರಸ್ತೆ, ಬೆಂಗಳೂರು | 16.12.2020 | ಧಾರ್ಮಿಕ | -- | ಆಕ್ಷೇಪಣೆಗಳಿವೆ | ನೀಡಿರುವುದಿಲ್ಲ |
| 3 | BANGALORE NORTH | ಮೌಂಟ್ ಕಾರ್ಮೆಲ್ ಪದವಿ ಪೂರ್ವ ಕಾಲೇಜು, ನಂ.೫೮, ಅರಮನೆ ರಸ್ತೆ, ಬೆಂಗಳೂರು | 24.09.2021 | ಧಾರ್ಮಿಕ | -- | ಆಕ್ಷೇಪಣೆಗಳಿವೆ | ನೀಡಿರುವುದಿಲ್ಲ |
| 4 | BANGALORE NORTH | ಹಸನತ್ ಮಹಿಳಾ ಪದವಿ ಪೂರ್ವ ಕಾಲೇಜು, ನಂ.೪೮, ಡಿಕೆನ್ಸನ್ ರಸ್ತೆ, ಬೆಂಗಳೂರು | 08.04.2019 | ಧಾರ್ಮಿಕ | -- | ಆಕ್ಷೇಪಣೆಗಳಿವೆ | ದಿ:08.12.2020 |
| 5 | BANGALORE NORTH | ಸಂತ ಆನ್ಸ್ ಪದವಿ ಪೂರ್ವ ಕಾಲೇಜು, ಮಿಲರ್ಸ್ ರಸ್ತೆ, ಬೆಂಗಳೂರು | 22.03.2019 | ಧಾರ್ಮಿಕ | -- | ಆಕ್ಷೇಪಣೆಗಳಿವೆ | ದಿ:08.12.2020 |
| 6 | BANGALORE NORTH | ಮಹಮದ್ ಇಸಾಕ್ ಪದವಿ ಪೂರ್ವ ಕಾಲೇಜು, ಡೇವಿಸ್ ರಸ್ತೆ, ಬೆಂಗಳೂರು | 26.03.2019 | ಧಾರ್ಮಿಕ | -- | ಆಕ್ಷೇಪಣೆಗಳಿವೆ | ದಿ:30.11.2020 |
| 7 | BANGALORE NORTH | ಸಂತ ಆನ್ಸ್ ಪದವಿ ಪೂರ್ವ ಕಾಲೇಜು, ರಾಮಮೂರ್ತಿನಗರ, ಬೆಂಗಳೂರು | 22.03.2019 | ಧಾರ್ಮಿಕ | -- | ಆಕ್ಷೇಪಣೆಗಳಿವೆ | ದಿ:08.12.2020 |
| 8 | BANGALORE NORTH | ಆರ್.ಬಿ.ಎನ್‌ರಿಂ.ಎಸ್. ಪದವಿ ಪೂರ್ವ ಕಾಲೇಜು, ಬೆಂಗಳೂರು | 27.05.2019 | ಧಾರ್ಮಿಕ | -- | ಆಕ್ಷೇಪಣೆಗಳಿವೆ | ದಿ:08.12.2020 |

| | | | | | | | |
|---|---|---|---|---|---|---|---|
| 9 | BANGALORE NORTH | ಸಂತ ಜೋಸೆಫ್ಸ್ ಮಹಿಳಾ ಪದವಿ ಪೂರ್ವ ಕಾಲೇಜು, ನಂ.49, ಪ್ರೋಮೆನಾದ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು | 26.03.2019 | ಧಾರ್ಮಿಕ | -- | ಆಕ್ಷೇಪಣೆಗಳಿವೆ | ದಿ:08.12.2020 |
| 10 | BELGAUM | ಜ್ಯೋತಿ ಪದವಿ ಪೂರ್ವ ಕಾಲೇಜು, ಬೆಳಗಾವಿ | 09-06-2020 | ಭಾಷಿಕ | ಇಲ್ಲಾ | ದಾಖಲೆಗಳನ್ನು ಸಲ್ಲಿಸಿರುವುದಿಲ್ಲ | ಕಡತ ಚಾಲನೆಯಲ್ಲಿದೆ |
| 11 | BIJAPUR | ಅಂಜುಮನ್ ಸಂಯುಕ್ತ ಪದವಿ ಪೂರ್ವ ಕಾಲೇಜು ಮುದ್ದೇಬಿಹಾಳ | 03-08-2020 | ಧಾರ್ಮಿಕ | ಇಲ್ಲ | ಆಕ್ಷೇಪಣೆಯಾಗಿದೆ | ದಿ: 05.03.2022 |
| 12 | BIDAR | ಕ್ರೇಸೆಂಟ್ ಪದವಿ ಪೂರ್ವ ಕಾಲೇಜು, ಬಸವ ಕಲ್ಯಾನ, ಬೀದರ್ | 03-09-2021 | ಧಾರ್ಮೀಕ | ಇಲ್ಲ | ಆಕ್ಷೇಪಣೆಯಾಗಿದೆ | ದಿ:18-02-2022 |
| 13 | CHITRADURGA | ಸಂತ ಜೋಸೆಫ್ ಕಾನ್ವೆಂಟ್ ಬಾಲಕಿಯರ ಪದವಿ ಪೂರ್ವ ಕಾಲೇಜು, ಚಿತ್ರದುರ್ಗ | 19/01/2022 | ಧಾರ್ಮೀಕ | ಅನ್ವಯಿಸುವುದಿಲ್ಲ | ಮಾಹಿತಿ/ದಾಖಲೆ ಸಲ್ಲಿಸಿರುವುದಿಲ್ಲ | 07-02-2022 |
| 14 | HAVERI | ಕೈಜೆನ್ ಪದವಿ ಪೂರ್ವ ಕಾಲೇಜು, ಸವಣೂರು, ಹಾವೇರಿ ಜಿಲ್ಲೆ. | 28-03-2017 | ಧಾರ್ಮೀಕ | ಇಲ್ಲ. | ಆಕ್ಷೇಪಣೆಯಾಗಿದೆ | ಕಡತ ಚಾಲನೆಯಲ್ಲಿದೆ |
| 15 | DHARWAD | ನೆಹರೂ ಪದವಿ ಪೂರ್ವ ಕಾಲೇಜು, ಹುಬ್ಬಳ್ಳಿ, ಧಾರವಾಡ ಜಿಲ್ಲೆ | | ಧಾರ್ಮೀಕ | ಇಲ್ಲ. | ಆಕ್ಷೇಪಣೆಯಾಗಿದೆ | ಕಡತ ಚಾಲನೆಯಲ್ಲಿದೆ |
| 16 | KALBURGI | ಅಲ್-ಫರಾನ್ ಪ.ಪೂ.ಕಾ, ಕಲಬುರಗಿ | 02-11-2016 | ಮತೀಯ | ಇಲ್ಲ | ಆಕ್ಷೇಪಣೆ | ಕಡತ ಚಾಲನೆಯಲ್ಲಿದೆ |
| 17 | KOLAR | ಸೇಂಟ್ ಆನ್ಸ್ ಬಾಲಕಿಯರ ಪದವಿ ಪೂರ್ವ ಕಾಲೇಜು, ಮುಳಬಾಗಿಲು, ಕೋಲಾರ | 03-01-2022 | ಮತೀಯ | ಇಲ್ಲ | ಮಾಹಿತಿ ಸಲ್ಲಿಸಿರುವುದಿಲ್ಲ | ದಿ:01-02-2022 |
| 18 | KOLAR | ಗೋಲ್ಡನ್ ಸ್ವತಂತ್ರ ಪದವಿ ಪೂರ್ವ ಕಾಲೇಜು, ಬಾಗೂರುಸೊನ್ನೆನಹಳ್ಳಿ, ಮಾಲೂರು ತಾಲೂಕು, ಕೋಲಾರ | 03-01-2022 | ಮತೀಯ | ಇಲ್ಲ | ಮಾಹಿತಿ ಸಲ್ಲಿಸಿರುವುದಿಲ್ಲ | ದಿ:01-02-2022 |
| 19 | MYSORE | ಸೆಂಟ್ ಆನ್ಸ್ ಪ.ಪೂ.ಕಾ,ಮೈಸೂರು | 27-05-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 10-03-2022 |
| 20 | MYSORE | ಫಾರೂಖಿಯಾ ಬಾಲಕಿಯರ.ಪಪೂ.ಕಾ ಮೈಸೂರು | 15-03-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 10-03-2022 |
| 21 | MYSORE | ಸಂತ ಫಿಲೋಮಿನಾ ಪಪೂಕಾ, ಮೈಸೂರು | 15-03-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 10-03-2022 |
| 22 | MYSORE | ಫಾರೂಖಿಯಾ ಪಪೂಕಾ ಮೈಸೂರು | 06-06-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 10-03-2022 |
| 23 | MYSORE | ಸೆಂಟ್ ಮೇರಿಸ್ ಬಾಲಕಿಯರ ಪ.ಪೂ.ಕಾ,ಮೈಸೂರು | 26-03-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 18-02-2022 |
| 24 | MYSORE | ಸಂತ ಜೋಸೆಫ್, ಸಂಯುಕ್ರ ಪಪೂಕಾ, ಮೈಸೂರು | 15--032019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 18-02-2022 |
| 25 | MYSORE | ಹಾಡ್ವಿರ್ಕ್ ಸಂಯುಕ್ತ ಪಪೂಕಾ, ಮೈಸೂರು | 15-03-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 18-02-2022 |
| 26 | MYSORE | ಹಿಲಾಲ್ ಸಂಯುಕ್ತ ಪಪೂಕಾ, ಮೈಸೂರು ಜಿಲ್ಲೆ | 15-03-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 18-02-2022 |

| | | | | | | | |
|---|---|---|---|---|---|---|---|
| 27 | MYSORE | ಸಂತ ಜೋಸೆಫ್ ಪಪೂಕಾ, ಮೈಸೂರು | 15-03-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 03-03-2022 |
| 28 | MYSORE | ಫಾರೂಖಿಯಾ ಪಪೂಕಾ ಅಜೀಸೇಠ್ ನಗರ, ಮೈಸೂರು | 15-03-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 18-02-2022 |
| 29 | MYSORE | ನೋಟ್ರೆ ಡೇಂ, ಪಪೂಕಾ, ಮೈಸೂರು | 27-05-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 03-03-2022 |
| 30 | MYSORE | ಹುಡಾ ಪಪೂಕಾ, ಮೈಸೂರು | 15-03-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 03-03-2022 |
| 31 | MYSORE | ಸಂತ ಅಂತೋಣಿ ಸಂಯುಕ್ತ, ಪಪೂಕಾ, ಮೈಸೂರು | 15-03-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 18-02-2022 |
| 32 | MYSORE | ಸಂತ ಜೋಸೆಫ ಪಪೂಕಾ, ಮೈಸೂರು | 15-03-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 18-02-2022 |
| 33 | MYSORE | ಟೇರೆಷಿಯನ್ ಮಹಿಳಾ ಪಪೂಕಾ, ಮೈಸೂರು | 15-03-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 10-03-2022 |
| 34 | MANDYA | ನಿರ್ಮಲ ಬಾಲಕಿಯರ ಪಪೂ ಕಾ, ಪಾಂಡವಪುರ | 07-09-2021 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 24-03-2022 |
| 35 | MANDYA | ಸಂಟ್ ಆನ್ಸ್ ಪಪೂಕಾ, ಮಳವಳ್ಳಿ | 13-12-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 24-03-2022 |
| 36 | RAICHUR | ಅಫ್ತಾಬ್ ಪದವಿ ಪೂವ ಕಾಲೇಜು, ಯರಮರಸ್ ಕ್ಯಾಂಪ್, ರಾಯಚೂರು | 05.10.2010 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 04.03.2022 |
| 37 | RAICHUR | ಅಲ್ ಕರೀಮ್ ಮಹಿಳಾ ಪದವಿ ಪೂರ್ವ ಕಾಲೇಜು, ರಾಯಚೂರು | 19.10.2016 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 04.03.2022 |
| 38 | RAICHUR | ಲೋಯೋಲ ಪದವಿ ಪೂರ್ವ ಕಾಲೇಜು, ಲೋಯೋಲನಗರ, ಮಾನ್ವಿ, ರಾಯಚೂರು | 30-06-2018 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 04.03.2022 |
| 39 | MANGLORE | sharada vidyanikethan pu college,ಎಸ್ ಎಸ್ ೩೦೭ | 25-07-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 01-02-2022 |
| 40 | MANGLORE | ಸಂತ ಫಿಲೋಮಿನಾ ಪ ಪೂ ಕಾ, ಫಿಲೋನಗರ, ದರ್ಬೆಎಸ್ ಎಸ್ ೦೦೧೪ | 18-06-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 01-02-2022 |
| 41 | MANGLORE | ಶಾರದ ಸ್ವತಂತ್ರ ಪ ಪೂ ಕಾಲೇಜು, ಕೊಡಿಯಾಲಬೈಲು, ಮಂಗಳೂರು ಎಸ್ ಎಸ್ ೦೧೪೭ | 03-06-2019 | ಧಾರ್ಮಿಕ | ಇಲ್ಲ | ಆಕ್ಷೇಪಣೆ | 01-02-2022 |
| 42 | MANGLORE | ಸಂತ ತೆರೇಸಾ ಪ ಪೂ ಕಾ, ಚರ್ಚ ರಸ್ತೆ, ಬೆಳ್ತಂಗಡಿ, ದಕ್ಷಿಣ ಕನ್ನಡ ಜಿಲ್ಲೆ ಎಸ್ ಎಸ್ ೦೨೪೭ | 9-3-2019 | ಧಾರ್ಮಿಕ | ಇಲ್ಲ | ಕಡತ ಚಾಲನೆಯಲ್ಲಿದೆ | ಕಡತ ಚಾಲನೆಯಲ್ಲಿದೆ |
| 43 | MANGLORE | ಮದನಿ ಪ ಪೂ ಕಾಲೇಜು, ಎಸ್ ಎಸ್ 0080 ಅಳೇಕಲ್, ಉಳ್ಳಾಲ, ದಕ್ಷಿಣ ಕನ್ನಡ ಜಿಲ್ಲೆ | 10-07-2019 | ಧಾರ್ಮಿಕ | ಇಲ್ಲ | ಕಡತ ಚಾಲನೆಯಲ್ಲಿದೆ | ಕಡತ ಚಾಲನೆಯಲ್ಲಿದೆ |
| 44 | UDUPI | CHRIST KING COMPOSITE PU COLLEGE, KARKALA, UDUPI | 15-07-2021 | ಮತೀಯ | ಇಲ್ಲ | ಆಕ್ಷೇಪಣೆ | 18-02-2022 |
| 45 | UDUPI | SALIATH GIRLS COMPOSITE PU COLLEGE, TONSE-HODE UDUPI | 15-07-2021 | ಮತೀಯ | ಇಲ್ಲ | ಆಕ್ಷೇಪಣೆ | 18-02-2022 |

| | | | | | | | |
|---|---|---|---|---|---|---|---|
| 46 | UDUPI | MILAGRIS PU COLLEGE, KALYANAPURA, BRAMHAVARA, UDUPI | 25-01-2022 | ಮತೀಯ | ಇಲ್ಲ | ಕಡತ ಚಾಲನೆಯಲ್ಲಿರುತ್ತದೆ. | - |
| 47 | UDUPI | ಸಂತ ಜೊನ್ಸ್ ಸಂಯುಕ್ತ ಪದವಿ ಪೂರ್ವ ಕಾಲೇಜು, ಶಂಕರಪುರ, ಉಡುಪಿ ಜಿಲ್ಲೆ | 25-01-2022 | ಮತೀಯ | ಇಲ್ಲ | ಕಡತ ಚಾಲನೆಯಲ್ಲಿರುತ್ತದೆ. | - |
| 48 | UDUPI | ನಿರ್ಮಲಾ ಸಂಯುಕ್ತ ಪದವಿ ಪೂರ್ವ ಕಾಲೇಜು, ಬ್ರಹ್ಮಾವರ, ಉಡುಪಿ ಜಿಲ್ಲೆ | 25-01-2022 | ಮತೀಯ | ಇಲ್ಲ | ಕಡತ ಚಾಲನೆಯಲ್ಲಿರುತ್ತದೆ. | - |
| 49 | UDUPI | ಸಂಂಂತ ಮೇರಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಕುಂದಾಪುರ, ಉಡುಪಿ ಜಿಲ್ಲೆ | 25-01-2022 | ಮತೀಯ | ಇಲ್ಲ | ಕಡತ ಚಾಲನೆಯಲ್ಲಿರುತ್ತದೆ. | - |
| 50 | SHIMOGA | ಹೋಲಿ ರಿಡಿಮರ್ ಸಂಯುಕ್ತ ಪ್ವಿ ಪೂರ್ವ ಕಾಲೇಜು, ಗಂಗನಕೊಪ್ಪ, ಹೊಸನಗರ, ಶಿವಮೊಗ್ಗ | 15-11-2021 | ಮತೀಯ | ಇಲ್ಲ | ಆಕ್ಷೇಪಣೆ | 14-02-2022 |

21/02/22

ಜಂಟಿ ನಿರ್ದೇಶಕರು(ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ